ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸ್ವಾಮಿ, ಈ ಹಂತದಲ್ಲಿ ಕಾವೇರಿ ೨ನೇ ಹಂತವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕೇಂದ್ರ ಸರ್ಕಾರಕ್ಕಾಗಲೀ, ವಿಶ್ವ ಬ್ಯಾಂಕಿಗಾಗಲೀ ಯಾವುದೇ ರೀತಿಯ ಬೇಡಿಕೆಯನ್ನು ಇಡದೆ ನಮ್ಮ ಬಡ್ಜೆಟ್ಟಿನಿಂದಲೇ ಅರ್ಕಾವತಿ ೪ನೇ ಹಂತದ ಕೆಲಸವನ್ನು ಮಾಡುತ್ತಿದ್ದೇವೆ. ಕಾವೇರಿ ೨ನೇ ಹಂತವನ್ನು ವಿಶ್ವ ಬ್ಯಾಂಕಿನಿಂದ ಸಾಲ ಪಡೆದು ಮಾಡಬೇಕೆಂದು ಸರ್ಕಾರದ ಪರಿಶೀಲನೆಯಲ್ಲಿದೆ. ಅದನ್ನು ಮಾಡಬೇಕಾದರೆ ಇನ್ನು ಕೆಲವಾರು ವರ್ಷಗಳು ಬೇಕಾಗುತ್ತದೆ. ಇದನ್ನು ಮಾಡದೆ ಹೋದರೆ ಶೀಘ್ರದಲ್ಲಿಯೇ ಬರತಕ್ಕ ತೊಂದರೆಯನ್ನು ಮತ್ತು ಅಭಾವವನ್ನು ಎದುರಿಸುವುದಕ್ಕೆ ಆಗುವುದಿಲ್ಲ.

Sri M. V. Rajasekharan.—Why did you not envisage this at the time when you completed the first stage?

Sri H. C. Srikantaiah.—I was not the Minister then.

Sri M. V. Rajasekharan.—I am sorry for the answer of the Minister. The Government is continuous one whether one party is in power or the other.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಇದು ಫೀಸಿಬಲ್ ಆಗಿರುವುದರಿಂದ ಮಾಡಬೇಕಾಗಿದೆ ; ಇದನ್ನು ಮಾಡೇ ಮಾಡುತ್ತೇವೆ. ಕಾವೇರಿ ಸೆಕೆಂಡ್ ಸ್ಟೇಜ್ ಬೇಗ ಮಾಡುವುದಕ್ಕೆ ಸಾಧ್ಯವಿಲ್ಲ. ಇದನ್ನು ಮಾಡದೇ ಹೋದರೆ ಬೆಂಗಳೂರು ನಗರಕ್ಕೆ ನೀರು ಬೇಗ ಸಿಗುವುದಿಲ್ಲ. ಎರಡು ಯೋಜನೆಗಳನ್ನು ಒಂದೊಂದಾಗಿ ತೆಗೆದುಕೊಂಡು ಮುಗಿಸುತ್ತೇವೆ.

ಶ್ರೀ ಜೆ. ಹೆಚ್. ಪಟೇಲ್.—ಕಾವೇರಿ ಎರಡನೇ ಯೋಜನೆಯನ್ನು ೧೯೮೬ನೇ ಇಸವಿಯಲ್ಲಿ ಪ್ರಾರಂಭ ಮಾಡುತ್ತೀರಾ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಪ್ರಾರಂಭ ಮಾಡುತ್ತೇವೆ. ಇದರಿಂದ ಯಾರಿಗೂ ತೊಂದರೆಯಾಗುವುದಿಲ್ಲ. ಅರ್ಕಾವತಿ ನಾಲ್ಕನೇ ಹಂತದ ಕೆಲಸವನ್ನು ೧೯೮೨ನೇ ಇಸವಿಯೊಳಗೆ ಖಂಡಿತವಾಗಿ ಮುಗಿಸುತ್ತೇವೆ.

(iii) re : Engaging Government counsels for defending the charges against Ministers before the Grover Commission of Enquiry.

Mr. Speaker.—The hon'ble member Sri H. D. Deve Gowda may raise matter under rule 312.

ಶ್ರೀ ಹೆಚ್. ಡಿ ದೇವೇಗೌಡ.—ಸಭಾಧ್ಯಕ್ಷರೇ, ತಮ್ಮ ಅನುಮತಿಯಿಂದ ಗ್ರೋವರ್ ಆಯೋಗದ ಮುಂದೆ ಇರತಕ್ಕ ಹಿಂದಿನ ಮಂತ್ರಿಗಳ, ಮುಖ್ಯಮಂತ್ರಿಗಳ ಮೇಲೆ ಕೆಲವು ಏನು ಆಪಾದನೆಗಳು ಇವೆ. ಅವುಗಳ ವಿಚಾರಣೆ ಸಂಬಂಧದಲ್ಲಿ ಹೈಕೋರ್ಟಿನ ಸರ್ಕಾರಿ ವಕೀಲರುಗಳು ಆಯೋಗದ ಮುಂದೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಹಾಜರಿದ್ದಾರೆ, ಅದು ಅಷ್ಟೇ ಅಲ್ಲ ಮುಖ್ಯಮಂತ್ರಿಗಳ ಚುನಾವಣೆ ಮೊಕದ್ದಮೆಯಲ್ಲೂ ಕೂಡ ಭಾಗವಹಿಸುತ್ತಿದ್ದಾರೆ. ಇದರ ಔಚಿತ್ಯ ಪ್ರಶ್ನೆ ಮಾಡುವುದಕ್ಕೋಸ್ಕರ ಈ ಒಂದು ವಿಷಯವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈಗ ಮಾನ್ಯ ನ್ಯಾಯಾಂಗ ಸಚಿವರು ಏನಿದ್ದಾರೆ ಅವರ ಗಮನಕ್ಕೆ ತಮ್ಮ ಮುಖಾಂತರ ಈ ವಿಷಯವನ್ನು ತರಲಿಕ್ಕೆ ಇಷ್ಟಪಡುತ್ತೇನೆ. ಸರ್ಕಾರಿ ವಕೀಲರು ಏನು ಇದ್ದಾರೆ ಅವರಿಗೆ ಕೇವಲ ರೀಟೈನಿಂಗ್ ಫೀಜ್ ಕೊಡುತ್ತೇವೆ ಎಂದು ಒಂದು ಮಾತನ್ನು ಹೇಳಿದರು, ಅವರು ಸರ್ಕಾರದ ಮೊಕದ್ದಮೆಗಳು ಏನಿವೆ ಅವುಗಳಿಗೆ ಮಾತ್ರ ಭಾಗವಹಿಸಬೇಕಾಗುತ್ತದೆ ಸಿವಿಲ್ ಮೊಕದ್ದಮೆಗಳು, ಖಾಸಗಿ ಮೊಕದ್ದಮೆಗಳಲ್ಲಿ ಹಾಜರಾಗುವುದಕ್ಕೆ ಯಾವುದೇ ನಿರ್ಬಂಧ ಹಾಕಿಲ್ಲ ಎಂದು ಹೇಳಬಹುದು. ಈಗ ಇಲ್ಲಿ ಒಂದು ವಿಷಯ ಉದ್ಭವವಾಗುತ್ತದೆ, ಬೆಂಗಳೂರಿನಲ್ಲಿ ಗ್ರೋವರ್ ಆಯೋಗ ೧೦, ೧೨, ೧೩ ದಿವಸ ತನ್ನ ವಿಚಾರಣೆ ಕೆಲಸ ಮಾಡತಕ್ಕ ಕಾಲದಲ್ಲಿ ಒಬ್ಬ ಸರ್ಕಾರಿ ವಕೀಲ ಆ ಆಯೋಗದಲ್ಲಿ ಯಾವ ಮಂತ್ರಿಗಳ ಮೇಲೆ ವಿಚಾರಣೆಯಾಗುತ್ತದೆ, ಆ ವಿಚಾರಣೆಗೆ ಸಂಬಂಧಪಟ್ಟಂತೆ

ಎಲ್ಲಾ ಆಪಾದನೆಗಳಲ್ಲಿ ಭಾಗವಹಿಸಿ ಅವರ ಪರವಾಗಿ ವಕೀಲತ್ತು ವಹಿಸುತ್ತಾರೆ ಎಂದರೆ, ಅವನನ್ನು ಸರ್ಕಾರದ ಪರವಾಗಿ ಯಾವ ಉದ್ದೇಶಕ್ಕಾಗಿ ನೇಮಕ ಮಾಡಿದ್ದಾರೆ ಅದರ ಮೂಲ ಉದ್ದೇಶಕ್ಕೆ ಧಕ್ಕೆಯುಂಟಾಗುತ್ತದೆ. ಇವರು ರಿಟೈನಿಂಗ್ ಫೀಜ್ ಕೊಡುತ್ತೇವೆ ಎಂದು ಹೇಳಬಹುದು. ಸುಮಾರು ೧೦, ೧೨, ೧೫ ದಿವಸಗಳ ಕಾಲ ಗ್ರೋವರ್ ಆಯೋಗದ ಮುಂದೆ ಬಂದು ಅವರು ವಕೀಲಿ ವೃತ್ತಿ ವಹಿಸಿಕೊಂಡು ಕೆಲಸ ಮಾಡುವ ಕಾಲದಲ್ಲಿ ಹೈಕೋರ್ಟಿನಲ್ಲಿ ಕೆಲಸ ಮಾಡುವವರು ಯಾರು? ಇದರ ಬಗ್ಗೆ ತಾವು ವಿವರಣೆ ಕೊಡಬೇಕಾಗುತ್ತದೆ. ನ್ಯಾಯಾಂಗ ಸಚಿವರು ಈ ವಿಷಯದಲ್ಲಿ ಸ್ವಲ್ಪ ಗಮನ ಹರಿಸಬೇಕಾಗುತ್ತದೆ. ಈಗ ಗೌರ್ನಮೆಂಟ್ ಅಡ್ವಕೇಟ್ಸ್ ಎಷ್ಟು ಜನ ಇದ್ದಾರೆ ಅದು ನನಗೆ ಗೊತ್ತಿಲ್ಲ. ಈಗ ಅಲ್ಲಿಯ ಕೆಲಸಕ್ಕೆ ಧಕ್ಕೆ ಆಗದ ರೀತಿಯಲ್ಲಿ ಕೆಲಸವನ್ನು ಹಂಚಿಕೊಂಡಿದ್ದರೆ, ಅದರ ವಿವರಣೆಯನ್ನು ನಮ್ಮ ಉಪ ನಾಯಕರು ಕೊಡಬಹುದು. ಈಗ ನಮ್ಮ ಪರವಾಗಿ ಹೈಕೋರ್ಟಿನಲ್ಲಿ ಕೆಲಸ ಮಾಡತಕ್ಕವರು ಎಷ್ಟು ಜನ ಇದ್ದಾರೆ. ಅವರಿಗೆ ಕೊಡತಕ್ಕ ಫೀಜ್ ಎಷ್ಟು ಆ ವಿಚಾರಗಳನ್ನೆಲ್ಲಾ ನಾನು ಈಗ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಇವರ ಫೀಜ್ ಒಂದು ದಿವಸಕ್ಕೆ ೫೦೦ ರೂಪಾಯಿ ಅಡ್‌ಜರ್ನ್‌ಮೆಂಟ್‌ಗೆ ತೆಗೆದುಕೊಂಡಿದ್ದಾರೆ. ನಾನು ಇದರ ವಿಚಾರವನ್ನೆಲ್ಲಾ ಲಾ ಡಿಪಾರ್ಟ್‌ಮೆಂಟ್ ಬೇಡಿಕೆ ಬಂದಾಗ ಹೇಳುತ್ತೇನೆ. ಶ್ರೀಮಾನ್ ಆರ್‌ಮುಗಂ ಅವರು ಇದು ಬಡ ಜನತೆಯ ಹಣ, ಗೌರ್ನ್‌ಮೆಂಟ್ ಈಸ್ ಸ್ಪೆಂಡಿಂಗ್ ಸೋ ಮಚ್ ಎಂದು ಕೂಗಿ ಹೇಳುತ್ತಿರುತ್ತಾರೆ. ಹಿಂದೆ ೨೦ ತಿಂಗಳ ಕಾಲದಲ್ಲಿ ಒಬ್ಬೊಬ್ಬ ಅಡ್ವಕೇಟ್ ಜನರಲ್, ಗೌರ್ನ್‌ಮೆಂಟ್ ಅಡ್ವಕೇಟ್ಸ್ ಡಿ. ಐ. ಆರ್. ಕೇಸ್ ಅಡಜರ್ನ್‌ಮೆಂಟ್‌ನಲ್ಲಿ ಎಂಟು, ಹತ್ತು ಲಕ್ಷ ರೂಪಾಯಿ ದುಡ್ಡು ಡ್ರಾ ಮಾಡಿದ್ದಾರೆ. ಈಗ ನಾನು ಅದರ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಅದಕ್ಕೆ ಸಂಬಂಧಪಟ್ಟ ಬೇಡಿಕೆ ಬಂದಾಗ ಮಾತನಾಡುತ್ತೇನೆ. ಈಗ ಅಡ್ವಕೇಟ್ ಜನರಲ್ ಅವರು ವರ್ಕ್ ಡಿಸ್ಟ್ರಿಬ್ಯೂಟ್ ಮಾಡಬಹುದು. ಸರ್ಕಾರದ ವಕೀಲರು ತನ್ನ ಕರ್ತವ್ಯ ನಿರ್ವಹಣೆ ಮಾಡತಕ್ಕಂಥಾದ್ದನ್ನು ಬಿಟ್ಟು ಈ ಗ್ರೋವರ್ ಆಯೋಗದ ಮುಂದೆ ರಾಜ್ಯದ ಚುನಾವಣಾ ತಕರಾರಿನಲ್ಲಿ ಭಾಗವಹಿಸುವುದರ ಔಚಿತ್ಯವೇನು? ಈಗ ವರ್ಕ್ ಲೋಡ್ ಇಲ್ಲದಿದ್ದರೆ ಸರ್ಕಾರಿ ವಕೀಲರಾಗಿ ಇಟ್ಟುಕೊಳ್ಳಬಹುದೇ? ಅದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕಾಗುತ್ತದೆ. ಈಗ ಒಂದು ಮಾತನ್ನು ಹೇಳಿದರೆ ಬಹುಶಃ ಮಾನ್ಯ ದೇವೇಗೌಡರು ಎಲ್ಲೆ ಮೀರಿ ಮಾತನಾಡಿದರು ಎಂದು ಅಂದುಕೊಳ್ಳಬಾರದು. The basic etiquency and quality of the person is lacking. I don't want to question the merit or efficiency but the basic etiquecy is not there.

SRI L. G. HAVANUR.—Sir, the person against whom allegations are made is not a Member of this House. So, he cannot defend himself when such aspersions are cast against him. I think propriety demands that such aspersions should not be cast against a person who will not have the opportunity to defend himself here.

SRI H. GANGADHARAN.—He is paid by the Government. We have got a right to comment upon him.

SRI L. G. HAVANUR.—Everybody is paid in this House. The notice sent by hon'ble Member under 312 contains the name of the person against whom allegations are made.

SRI H. D. DEVE GOWDA.—When a member raises a matter under 312, he should give the background materials under Rule 312. The point is that I have not yet dragged his name on the floor of the House. Even if he is not a member of the House, it is for the Government to defend the person.

SRI L. G. HAVANUR.—I have got a copy of the matter that has been raised in which the name of Mr. Chandrakantraj Urs is mentioned. Among other things he has said that Mr. Chandrakantraj

Urs has been appointed to defend Mr. Devaraj Urs against whom a charge is being enquired into by the Grover Commission. He has also said that this would in other words means spending Government money to defend the case of the Chief Minister before the Grover Commission. But the speech now made is materially different from what is being raised under Rule 312.

† ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ನ್ಯಾಯಾಂಗ ಸಚಿವರಿಗೆ ಉತ್ತರ ಹೇಳಲಿಕ್ಕೆ ಅಧಿಕಾರ ಇದೆ. ಸಂಬಂಧಪಟ್ಟ ವ್ಯಕ್ತಿಯ ಹೆಸರನ್ನು ಸೂಚಿಸಿರತಕ್ಕದ್ದರ ಬಗ್ಗೆ ತಾವು ಕ್ರಿಯಾಲೋಪ ಎತ್ತಿದ್ದೀರಿ. ನಾನು ಈ ಸಭೆಯಲ್ಲಿ ಅವರ ಹೆಸರನ್ನು ನಮೂದು ಮಾಡಿಲ್ಲ. ಇವೊತ್ತು ೨೫ ಜನ ಗೌರ್ನಮೆಂಟ್ ಅಡ್ವಕೇಟ್ಸ್ ಇದ್ದರೆ ಅವರೆಲ್ಲಾ ಹೋಗುತ್ತಿಲ್ಲ. ನಾವು ನೋಟೀಸ್ ಕೊಡುವಾಗ ವ್ಯಕ್ತಿಯ ಹೆಸರನ್ನು ತಿಳಿಸಬೇಕಾಗುತ್ತದೆ. In the notice I wanted to make it clear as to who appeared before the Grover Commission. That has to be mentioned in the notice to get details from the Government. It is for the Government to defend that. ಇವೊತ್ತು ರೂಲ್ ೩೧೨ರ ಕೆಳಗೆ ತಾವು ಕೊಟ್ಟಿರತಕ್ಕ ಅನುಮತಿ ಆಧಾರದ ಮೇಲೆ ಈ ವಿಷಯವನ್ನು ತೆಗೆದುಕೊಂಡಿದ್ದೇವೆ. ಚಂದ್ರಕಾಂತರಾಜ್ ಅರಸ್ ಅವರ ಹೆಸರನ್ನು ಇಲ್ಲಿ ನಾನು ನಮೂದು ಮಾಡಿಲ್ಲ, ರೂಲ್ಸ್ ಪ್ರಕಾರ ಹೆಸರನ್ನು ಸರ್ಕಾರಕ್ಕೆ ತಿಳಿಸಬೇಕಾಗುತ್ತದೆ. ಆದ್ದರಿಂದ ನಾವು ಪತ್ರದಲ್ಲಿ ಹೆಸರನ್ನು ಸೂಚನೆ ಮಾಡಿದ್ದೇವೆ. ನ್ಯಾಯಾಂಗ ಸಚಿವರಾಗಿ ಸರ್ಕಾರದ ಪರವಾಗಿ ಉತ್ತರ ಕೊಡುವುದಕ್ಕೆ ಅವರಿಗೆ ಹಕ್ಕಿದೆ. ಗ್ರೋವರ್ ಕಮಿಷನ್‌ನಲ್ಲಿ ನನಗೂ ಅವರಿಗೂ ನಡೆದಂಥ ಒಂದು ಪ್ರಕರಣ ಪತ್ರಿಕೆಯಲ್ಲಿ ವರದಿಯಾಗಿದೆ. ಅದರ ಮೆರಿಟ್ಸ್ ಮೇಲೆ ನಾನು ಆರ್ಗ್ಯು ಮಾಡುತ್ತಾ ಇಲ್ಲ. ಅವರಿಗೆ ದಕ್ಷತೆ ಇರಬಹುದು, ಅವರು ಬಹಳ ಮೇಲ್ಮಟ್ಟದ ಮೇಧಾವಿಗಳಿರಬಹುದು. He may be an international figure. ಇರಬಹುದೇನೋ ನನಗೆ ಗೊತ್ತಿಲ್ಲ. ಅದರ ಬಗ್ಗೆ ನಾನು ಹೋಗುವುದಿಲ್ಲ. ನಾನು ಅವರ ಕಾಂಪಿಟೆನ್ಸಿ ಬಗ್ಗೆ ಪ್ರಶ್ನೆ ಮಾಡುವುದಿಲ್ಲ. ಪೇಪರಿನಲ್ಲಿ ಅವರಿಗೂ ನನಗೂ ನಡೆದಂಥ ಪ್ರಕರಣ ಅಪ್ಪಿಯರಾಗಿದೆ. ಅವರಿಗೆ ಶಕ್ತಿ ಇದೆಯೋ ಇಲ್ಲವೋ. ಕಾಂಪಿಟೆನ್ಸಿ ಇದೆಯೋ ಇಲ್ಲವೋ ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಉಚ್ಚ ನ್ಯಾಯಾಲಯಕ್ಕೆ ಸರ್ಕಾರ ಶಿಫಾರಸು ಮಾಡುವಾಗ ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಕ್ಯಾಬಿನೆಟ್‌ನಲ್ಲಿ ಏನು ನಿರ್ಣಯ ತೆಗೆದುಕೊಂಡಿದ್ದೀರಿ, ಅದನ್ನು ಹೇಳತಕ್ಕಂಥಾದ್ದಲ್ಲ, ಅದು ಪತ್ರಿಕೆಯಲ್ಲಿ ವರದಿಯಾಗಿದೆ. ತಾವು ಸಚಿವರಾಗುವುದಕ್ಕಿಂತ ಮುಂದೆ ಹಿಂದಿನ ಸರ್ಕಾರದಲ್ಲಿ ನಿರ್ಣಯ ಮಾಡಿದ್ದಾರೆ. ಏನೆಂದರೆ, ಆಯೋಗಗಳ ಮುಂದೆ ಇರತಕ್ಕ ಆಪಾದನೆಗಳ ಬಗ್ಗೆ ಅವರವರೇ ತಮ್ಮ ಸ್ವಂತ ಖರ್ಚಿನಲ್ಲಿ ವಕೀಲರನ್ನು ನೇಮಕ ಮಾಡಿಕೊಂಡು ತಮಗೆ ಸಂಬಂಧಪಟ್ಟ ಮೊಕದ್ದಮೆಗಳನ್ನು ವ್ಯವಹರಿಸತಕ್ಕಂಥಾದ್ದು ಎಂದು ಇದೆ. ಆದರೆ ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಅವರೇ ತಮ್ಮ ವಕೀಲರಿಗೆ ಫೀಸನ್ನು ಕೊಡಬಹುದು. ಮಾನ್ಯ ಮಂತ್ರಿಗಳು ಹೇಳಿದ ಹಾಗೆ He may have engaged him privately. Government Advocate has not appeared before the Grover Commission or before the High Court in the election petition of the Chief Minister ; it may be true. ಇವತ್ತು ರಿಟೈನಿಂಗ್ ಫೀಸ್ ಕೊಟ್ಟುಕೊಂಡು ಇವರನ್ನು ಏನು ಇಟ್ಟುಕೊಂಡಿದ್ದೀರಿ, ಇವರು ಹೈಕೋರ್ಟಿನಲ್ಲಿ ನಮ್ಮ ಸರ್ಕಾರದ ಪರವಾಗಿ ವಕೀಲಿ ಕೆಲಸಮಾಡುವುದಕ್ಕೆ ಇಟ್ಟುಕೊಂಡಿದ್ದಿರೀ ಪರಂತು ಕೆಲಸ ಇಲ್ಲದ ದಿವಸ ಬೇರೆಯವರ ಮೊಕದ್ದಮೆಗಳಲ್ಲಿ ಭಾಗವಹಿಸಲಿಕ್ಕೆ ನಿರ್ಬಂಧವಿಲ್ಲ ಎಂದು ಹೇಳಬಹುದು. ೧೦–೧೨ ದಿವಸ ಕೆಲಸ ಇಲ್ಲ ಅಂದರೆ, ನೀವು ಏನು ಗವರ್ನಮೆಂಟ್ ಅಡ್ವೋಕೇಟುಗಳನ್ನು ನೇಮಕ ಮಾಡಿದ್ದೀರಿ ಅಷ್ಟು ಸಂಖ್ಯೆಯ ಅವಶ್ಯಕತೆ ಇಲ್ಲ ಎಂದು ಹೇಳಬೇಕಾಗುತ್ತದೆ. ಹೆಚ್ಚಾಗಿ ಮಾಡಿದರೆ ಸರ್ಕಾರಕ್ಕೆ ಹೊರೆಯಾಗುತ್ತದೆ. ಪ್ರತಿದಿನ ಅವರಿಗೆ ಫೀಸ್ ಕೊಡುತ್ತೀರಿ. ನನಗೆ ದಯಮಾಡಿ ಈ ವಿಷಯದಲ್ಲಿ ತಾವು ವಿವರಣೆ ಕೊಡಬೇಕು. ಏನೆಂದರೆ, ಸರ್ಕಾರದ ಪರವಾಗಿ ಇರತಕ್ಕ ವ್ಯಕ್ತಿ ೨ ಪ್ರಕರಣಗಳಲ್ಲಿ ೮–೧೦ ದಿವಸ ತೆಗೆದುಕೊಂಡರೆ, ಹೈಕೋರ್ಟಿನಲ್ಲಿ ಸರ್ಕಾರದ ಪರವಾಗಿ ಕೆಲಸ ಮಾಡುವುದಕ್ಕೆ ಅಡಚಣೆಯಾಗುವುದಿಲ್ಲವೆ? ಸರ್ಕಾರಿ ಕೆಲಸಕ್ಕೆ ತೊಂದರೆಯಾಗುವುದಿಲ್ಲವೇ ಇದರ ಬಗ್ಗೆ ತಮ್ಮಿಂದ ಉತ್ತರವನ್ನು ಬಯಸುತ್ತೇನೆ. ಕೆಲವು ಕೇಸುಗಳಲ್ಲಿ ೨–೩–೪ ದಿವಸ ಆರ್ಗ್ಯು ಮಾಡುತ್ತಾರೆ. ಕೋರ್ಟ್‌ನಲ್ಲಿ ವಿಳಂಬವಾಗುತ್ತದೆ ಎಂದು ಹೇಳಬಹುದು. ಉಚ್ಚನ್ಯಾಯಾಲಯಕ್ಕೆ

ಸರ್ಕಾರಕ್ಕೆ ಸಂಬಂಧಪಟ್ಟ ಕೆಲವು ಕೇಸುಗಳ ಬಗ್ಗೆ ತೀವ್ರವಾಗಿ ಮನವಿಯನ್ನು ಸಲ್ಲಿಸುವುದಕ್ಕೆ ಸಾಧ್ಯತೆಯಿಲ್ಲ ಎನ್ನತಕ್ಕ ಪ್ರಕರಣಗಳನ್ನು ನಾನು ಸಭೆಯ ಗಮನಕ್ಕೆ ತರಬಲ್ಲೆ, ಈಗ ಆ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಂಡು ಉತ್ತರ ಕೊಡಬೇಕಾಗುತ್ತದೆ. ಇದು ಸೆನ್ಸಿಟೀವ್ ಮ್ಯಾಟರ್. ಮಾನ್ಯ ಮುಖ್ಯಮಂತ್ರಿಗಳಿಗೆ ಚಂದ್ರಕಾಂತರಾಜ್ ಅರಸ್ ಅವರು ಸಂಬಂಧ ಇರಬಹುದು, ಅದು ಬೇರೆ ವಿಷಯ. ಅವರ ಮನೆ ಸಂಬಂಧಕ್ಕೂ ನನಗೂ ಸಂಬಂಧವಿಲ್ಲ. ಸರ್ಕಾರಿ ಕೆಲಸ ಕಾರ್ಯಗಳನ್ನು ನಡೆಸತಕ್ಕ ಕಾಲದಲ್ಲಿ ನಿರ್ದಿಷ್ಟವಾಗಿ ಇವುಗಳನ್ನು ಹೇಳಬೇಕಾಗುತ್ತದೆ. ಸರ್ಕಾರದವರು ಅಲ್ಲಿರತಕ್ಕ ಗವರ್ನಮೆಂಟ್ ಅಡ್ವೋಕೇಟ್ಸನ್ನು ಕಡಿಮೆ ಮಾಡಬೇಕಾಗುತ್ತದೆಂದು ಸೂಚಿಸಿ, ಈ ಒಂದು ವಿಷಯದಲ್ಲಿ ನಿಖರವಾದ ಉತ್ತರ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

† SRI A. LAKSHMISAGAR.—Mr. Speaker, Sir, I would invite your kind attention to the Karnataka Law Officers Appointment and Conditions of Service Rules, 1977. These rules are made to govern the appointment conditions of service and remuneration payable to the Law Officers of the State of Karnataka. Rule 4 provides that the Law Officers are under the administrative control of the Minister for Parliamentary Affairs and that they are under the administrative control of the Advocate General. Under Rule 7 except with the special sanction of the Government, no Law Officer or his partner if any, shall hold any brief against the Government, appear, or act in any case against the Government or give advice to private parties in case in which he is likely to be called upon to advise the Government or any Government servant. Under Rule 11, no Law Officer appearing on behalf of the Government shall, without the permission of the Government, communicate, directly or indirectly, to any person, any document or information which has come into his possession in the course of his duties save in so far as is necessary for the conduct of the cases and to safeguard the interests of the Government. Then, the last rule I would like to refer is Rule 19 which says that it shall be the duty of a Law Officer to advise the Government and all officers of the Government, not only in respect of any proceedings whether civil or criminal, which he has to conduct on behalf of the Government, or on behalf of any Government servant. It also relates to all legal matters concerning Government business of any kind.

These are the relevant rule governing the conduct of Government Advocate, Sir. Sir, I am not making any kind of comments on the Government Advocate in question. What we are trying to emphasize and impress upon the Government is this ; I question the employment of the Government Advocate in question to appear for the Hon'ble Chief Minister on two grounds. One is on the ground of propriety and the other ground is the ground which would render his function as a Government Advocate before the High Court in jeopardy. These are the grounds on which I comment upon. The Government Advocate has been appearing before Justice Mir Iqbal Hussain Commission and when it ceased to function, the same Government Advocate was enga-

ged by the Hon'ble Chief Minister to appear before Justice Grover Commission, as pointed out by Mr. H. D. Deve Gowda. The average number of days on which the Government Advocate has to be in the Grover Commission is normally more than 15 days—7 to 10 days of hearing and 3 to 4 days of looking into the papers connected with the allegation. So, for a period of 15 days, he will not be in a position to attend to the normal functions of the Government Advocate before the High Court for which he is appointed under these rules and for which is paid.

(MR. CHAIRMAN Sri H.T. KRISHNAPPA in the Chair)

Then Sir I am told, I am subject to correction, as Mr. Devegowda put it, that the previous Government took a cabinet decision that in the case of Ministers against whom allegations have been made and who are to appear before the Commission, they should engage their own Advocates to defend themselves before the Commission. If that is so, the engagement of the Government Advocate to appear for the Chief Minister is highly objectionable no more than one grounds.

5-00 P.M.

Then, Sir, all the previous Ministers, Ex-Ministers against whom allegations have been made are being represented by different Advocates. No Government Advocate is appearing for any Ex-Minister or against any present Ministers. This is another point that should be noted.

The final point on which I should like to draw the attention of this House is......

Mr. CHAIRMAN- Please be brief.

SRI A. LAKSHMI SAGAR.- I am not taking a single minute more and not a single sentence more will be uttered by me than is necessary. There are two points one is propriety. The second point is this: If Government Advocate is entrusted with the papers of the Government and the same Advocate is also engaged by the Chief Minister, if there is a conflict between the interests of the State and the interests of the Chief Minister, who is going to support the Government Advocate? Is he going to support the State Government or the Chief Minister is a matter that is inextricably connected with this engagement of the Government Advocate.

Then, Sir, I would put this hypothetical question- Suppose on the findings of the Grover Commission, out of 6, in 4 of them the Commission has found the Hon. Chief Minister guilty of several offences, if he is asked by the State Government to give his legal opinion as to follow-up action that should be taken against the Hon. Chief Minister, what legal opinion he would give?

SRI L.G. HAVANUR.— I rise on a point of order Could I be expected to give answers on hypothetical questions?

SRI A. LAKSHMI SAGAR.— I will read the latter portion of Rule 11 which reads as follows:

> " It shall be the duty of the Law Officer to advise the Government and all Officers of the Government not only in respect of any proceedings whether Civil or Criminal which he asked to conduct on behalf of the Government or on behalf of Government Servants but also on all legal matters concerning Government business of any kind that the Government or any Government servant may called upon him to do so..."

Mr. Devaraj Urs is before the Grover Commission as an individual. Are you going to engage the services of a Government Advocate to defend a person whose conduct is not connected with the functioning of the Government? In fact this is the only point which I should like to place before this House. Therefore, the use of the office of the Government Advocate is improper, objectionable and if any instance is necessary to show that the Hon. Chief Minister has abused his position as Chief Minister, here is the instance of the Government Advocate being made use of by the Chief Minister it is a clear, unmistakable instance of abuse of authority by the Chief Minister.

ಚೇರ್ಮನ್‌ರವರು.— ರೂಲ್ ೩೧೨ ರ ಕೆಳಗೆ ತಾವು ಸ್ಪಷ್ಟೀಕರಣ ಕೇಳುವುದಕ್ಕೆ ಅವಕಾಶವಿರುತ್ತದೆ. ಸ್ಪಷ್ಟೀಕರಣ ಕೇಳುವುದಾದರೆ ಯಾವ ಯಾವ ಪಾಯಿಂಟ್ಸ್ ಅವಶ್ಯಕವೆಂದು ಕಂಡುಬರುತ್ತದೆ ಅದನ್ನು ಪ್ರಾಸಂಗಿಕವಾಗಿ ವ್ಯಕ್ತಪಡಿಸಬೇಕು. ಅದನ್ನೆಲ್ಲ ಮಾಡಿದ್ದಾರೆ ಜನರಲ್ ಡಿಬೇಟ್ ತರಹ ಪರಿವರ್ತನೆ ಮಾಡದೆ ೩೧೨ ರ ಪ್ರಕಾರ ಕೆಲವು ಸ್ಪಷ್ಟೀಕರಣಗಳನ್ನು ತಾವು ಕೇಳಬಹುದು. ಮಾನ್ಯ ದೇವೇಗೌಡರು ಸಹ ಇದರ ಬಗ್ಗೆ ಕೇಳಿದ್ದಾರೆ ತಾವು ಕಾನೂನನ್ನು ಅನುಸರಿಸದೆ ಹೋದರೆ ಕಾನೂನನ್ನು ಮುರಿದಂತಾಗುತ್ತದೆ. ಅದು ಸರಿಯಲ್ಲ

ಶ್ರೀ ಎ. ಲಕ್ಷ್ಮೀಸಾಗರ್.— ನಾವು ಹೇಳುವುದೇನೆಂದರೆ ತಾವು ಕೊಟ್ಟಿರತಕ್ಕಂಥ ವಿವರಣೆ ವಾಕ್ಯವನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗಿದ್ದರೂ ಸಹ ಒಂದು ಮಾತನ್ನು ಹೇಳಬೇಕಾಗಿದೆ. ಕೆಲವು ದಿವಸಗಳಿಂದ ಈ ಸಭೆಯಲ್ಲಿ ನಾನು ಸಕ್ರೀಯವಾಗಿ ಭಾಗವಹಿಸುತ್ತಿದ್ದೇನೆ. ನಾನು ನೋಡಿದ ಹಾಗೆ ಈ ನಿಯಮವನ್ನು ಅಕ್ಷರವತ್ತಾಗಿ ಯಾವ ಸಮಯದಲ್ಲೂ ಕೂಡ ಅನ್ವಯಿಸುತ್ತಿಲ್ಲ. Therefore if any example is necessary of the instance of the Chief Minister making use of the Governmental machinery toadvance his own interests at the cost of the Government and against the interest of the Government, this is one such clear unmistakable instance, and the Chief Minister shall be held responsible for this.

Then, Sir, lastly, I would like to ask one clarification. Why only this particular Government Advocate should have been thought of as the Advocate? There are 1200 Advocates and I am the Vice-President of the Advocates' Association.

SRI M.C. NANAIAH.–I rise on a point of order. While under Rule 312, what they wanted is, whether that person has been engaged as a Government Advocate or not. If the Minister gives a reply that he has been engaged as the Government Advocate, then, there may be a clarification and if he attends in his personal capacity, then, the matter ends and no further clarification is needed. Regarding propriety or otherwise, with regard to the Government Advocate appearing before the Commission etc., I would like to say that these matters cannot be taken up now. We should strictly confine ourselves to the notice which has been given under Rule 312, and seek a clarification. If the Minister says that he has been engaged as a Government Advocate then only there will be a clarification.

SRI A. LAKSHMISAGAR.–I am in entire agreement with you.

MR. CHAIRMAN.– I uphold the point of order. Mr. Lakshmi Sagar himself has accepted that the scope under Rule 312 is limited and there is no opportunity or occasion for any member to make a speech on that. There is a scope to seek only clarifications from the Government.

SRI H.D. DEVEGOWDA.– If that is the position, then only Starred Questions could be put and we may get the answers from the Ministers.

MR. CHAIRMAN.– I have not said that these are matters which are not relevant for seeking clarifications. I would like to know from the hon. Members of the opposition whether at any point of time in the past, such a debate was being allowed under Rule 312?

SRI S.S. ARAKERI.– There was no such occasion in the past.

MR. CHAIRMAN.– The Government is there to defend their actions. If they cannot defend, then you will win the point. Please gives an opportunity to the Government to answer your accusations.

ಶ್ರೀ ಎಚ್.ಡಿ. ದೇವೇಗೌಡ – ರೂಲ್ ೩೧೨ರ ಕೆಳಗೆ ಸೂಚನೆಯನ್ನು ಕಳುಹಿಸಿರುವವನು ನಾನು ಆದರೆ ಹಿಂದಿನ ತಮ್ಮ ಭಾಷಣ, ಮತ್ತು ಸರ್ಕಾರದ ಉತ್ತರ ಎಲ್ಲಾ ತೆಗೆದು ತಮ್ಮ ಮುಂದೆ ಇಡುತ್ತೇವೆ. ಅದನ್ನು ತಾವು ಪರಿಶೀಲನೆ ಮಾಡಿ ನಾಳೆ ತಮ್ಮ ಗಹನವಾದ ರೂಲಿಂಗನ್ನು ಕೊಡಬಹುದು.

ಚೇರ್ಮನ್‌ರವರು.– ನಾನೂ ಆ ತರಹ ಅಪರ್ಚುನಿಟೀಸ್ ಉಪಯೋಗಿಸಿಕೊಂಡಿದ್ದರೂ ಇರಬಹುದು. ಆದರೆ ಹಾಗೆ ಮಾಡಬಾರದು.

SRI A. LAKSHMI SAGAR.–I am thankful to my friend Mr. Nananiah for having remained a point which I had forgotten. If the Government Advocate is paid by the State Government as Government Advocate and therefore there is no express prohibition under the rules and is entitled to appear before the Grover Commission on behalf of the Cheif Minister that would be the point which my learned friend Mr. Havanur to make. I anticipated too. There are two points here.

Let the Hon'ble Minister face the situation. If the Government Advocate is not paid by the Government to appear for Chief Minister in his individual capacity, then as Government Advocate when his services are require before the High Court, he is not available for 15 days in a month to appear on behalf of the Government. There is a conflict of interests, whether the Government Advocate is paid to defend the Government, not to corrupt Ministers or a corrupt Chief Minister or any other persons, but to defend the Government against all other persons. But here he is being used to persons. This is the way in which process there is a clear abuse of authority in engaging the services of a Government Advocate.

† ಶ್ರೀ ಪಿ. ರಾಮ್‌ದೇವ್.—ಗಮನ ಸೆಳೆಯುವ ಸೂಚನೆಯನ್ನೂ ಕಳುಹಿಸಿದ್ದೇನೆ ಮತ್ತು ೩೧೨ ರ ಪ್ರಕಾರ ಸೂಚನೆಗೂ ಸಹಿ ಹಾಕಿ ಕಳುಹಿಸಿಕೊಟ್ಟಿದ್ದೇನೆ. ಇದರ ಬಗ್ಗೆ ನಾನು ವಿವರಣೆ ಕೇಳ ಬಯಸುತ್ತೇನೆ. ಇದರ ಬಗ್ಗೆ ಮಾನ್ಯ ದೇವೇಗೌಡರು ಹಾಗೂ ಶ್ರೀ ಲಕ್ಷ್ಮೀಸಾಗರ್‌ರವರು ಕೇಳಿದ್ದಾರೆ. ನಾನು ಎರಡು ವಿವರಣೆಗಳನ್ನು ಮಾತ್ರ ಪಡೆಯ ಬಯಸುತ್ತೇನೆ. ಮೊದಲನೆಯದು. ಮಾನ್ಯ ದೇವರಾಜ ಅರಸುರವರು ಸಭಾ ನಾಯಕರೂ ಹೌದು, ಮತ್ತು ಈ ರಾಜ್ಯದ ಮುಖ್ಯಮಂತ್ರಿಗಳೂ ಹೌದು. ಆಗ ಮಂತ್ರಿ ಮಂಡಲದಲ್ಲಿ ಕೆಲಸ ಮಾಡುತ್ತಿದ್ದಂತಹ ಕೆಲವು ಮಂತ್ರಿ ಮೇಲೆ ಬಂದಿರತಕ್ಕಂಥ ಆಪಾದನೆಗಳನ್ನು ವಿಚಾರಣೆ ಮಾಡಲು ಅವರವರ ಸ್ವಂತ ಹಣದಿಂದ ವಕೀಲರುಗಳನ್ನು ಇಟ್ಟು ಕೊಂಡಿದ್ದರು. ಆದರೆ ಮುಖ್ಯ ಮಂತ್ರಿಯವರೊಬ್ಬರಿಗೆ ಮಾತ್ರ ಈ ವಿಚಾರದಲ್ಲಿ ಪಕ್ಷ ಪಾತ ಮಾಡಿರುವುದು ಏಕೆ? ಗ್ರೋವರ್ ಆಯೋಗ ರಚನೆಯಾಗಿರುವುದು ಅಧಿಕಾರ ದುರುಪಯೋಗ ಮಾಡಿರುವುದನ್ನು ವಿಚಾರಣೆ ಮಾಡುವುದಕ್ಕೋಸ್ಕರ. ಇದರಲ್ಲೂ ಅವರು ಅಧಿಕಾರ ದುರುಪಯೋಗ ಮಾಡಿರುವುದು ನ್ಯಾಯವೇ? ರಾಜ್ಯದ ಮುಖ್ಯಮಂತ್ರಿಗಳಾಗಿ ಒಂದು ಮಾರ್ಗದರ್ಶನ ಮಾಡತಕ್ಕಂಥಾವರು ಹೀಗೆ ಮಾಡಿರುವುದು ನ್ಯಾಯವೇ ಎಂಬುದಾಗಿ ತಮ್ಮ ಮೂಲಕ ಕೇಳುತ್ತೇನೆ. ಎರಡನೆಯದಾಗಿ ಇದರಿ ಸರ್ಕಾರದ ಅಧಿಕಾರಿಗಳ ಉಪಯೋಗ ಕೂಡ ಮಾಡಿಕೊಂಡಿದ್ದಾರೆ. ಈಗಾಗಲೇ ಶ್ರೀಮತಿ ಇಂದಿರಾ ಗಾಂಧಿಯವರ ಕೇಸನ್ನು ತಾವು ನೋಡಿದ್ದೀರಾ.

ಚೇರ್ಮನ್‌ರವರು. — ತಾವು ಈಗ ಎತ್ತಿರುವಂತಹ ಪ್ರಶ್ನೆಗೆ ಸ್ಪಷ್ಟೀಕರಣ ಕೇಳತಕ್ಕಂಥಾದ್ದು ಸೂಕ್ತ. ಆದರೆ ಆಪಾದನೆ ಮಾಡತಕ್ಕಂಥ ರೀತಿಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಸೂಕ್ತ ಅಲ್ಲ. ಮಾನ್ಯ ಮಂತ್ರಿಗಳು ಕೊಡತಕ್ಕಂಥ ಉತ್ತರ ಸರಿ ಇಲ್ಲದಿದ್ದರೆ ಮತ್ತು ಇದರಿಂದ ಅಡ್ಡಿ ಆತಂಕಗಳೇನಾದರೂ ಇದ್ದರೆ ಆಗ ತಾವು ಸ್ಪಷ್ಟೀಕರಣ ಕೇಳುವುದಕ್ಕೆ ಗಮನ ಹರಿಸಬಹುದೇ ಹೊರತು ಈ ರೀತಿ ಆಪಾದನೆ ಮಾಡತಕ್ಕಂಥ ರೀತಿಯಲ್ಲಿ ಸಭೆಯಲ್ಲಿ ಆಪಾದನೆ ಮಾಡುತ್ತಾ ಹೋದರೆ ಬಹಳ ಕಷ್ಟವಾಗುತ್ತದೆ ತಾವು ಹೇಳುವುದು ಸರಿಯಲ್ಲವೆಂದು ಮತ್ತೊಬ್ಬರು. ಮತ್ತೊಬ್ಬರು ಹೇಳುವುದು ಸರಿಯೆಂದು ಬೇರೆಯವರು ಅನಾವಶ್ಯಕವಾಗಿ ಸಭೆಯನ್ನು ನಡೆಸಿಕೊಂಡು ಹೋಗುವುದಕ್ಕೆ ಅಡ್ಡಿ ಆತಂಕಗಳನ್ನು ಉಂಟು ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ತಾವು ಸ್ಪಷ್ಟೀಕರಣ ಕೇಳಬೇಕೆಂದು ಕೇಳುತ್ತೇನೆ.

SRI B. B. SAYANAK.—Sir, I raise a point of order. When the Chair is on its legs three Congress people have come inside. Is it correct? I want your ruling.

MR. CHAIRMAN.—Now I request the Hon'ble Minister to reply to the clarification and in the event of the Hon'ble Members expressing dissatisfaction or any doubt about his statement they are at liberty to seek further clarification with the permission of the Chair.

SRI B. B. SAYANAK.—Sir I want your ruling on my point of order.

MR. CHAIRMAN.—I uphold the hon'ble Members point of order.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಮುಂಚೆ ಮತ್ತು ಅಕ್ಷರಶಃ ಕಾನೂನು ಪ್ರಕಾರ ಹೋಗುವುದಕ್ಕೆ ಏನಾದರೂ ಒಂದು ಸಂಪ್ರದಾಯವನ್ನು ಬೆಳೆಸಿಕೊಂಡು ಹೋಗತಕ್ಕಂಥಾದ್ದು ಧರ್ಮ. ಆ ರೀತಿ ಹಿಂದೆ ಸಂಪ್ರದಾಯವನ್ನು ಹಾಕಿಕೊಳ್ಳದಿದ್ದರೆ, ಮುಂದೆ ಹೊಸ ಸಂಪ್ರದಾಯವನ್ನು ಹಾಕತಕ್ಕಾಂಥಾದ್ದು ಇದರೊಳಗೆ ಇದೆ. ಸನ್ಮಾನ್ಯ ಸದಸ್ಯರು ಹೇಳಿದಹಾಗೆ ಮುಖ್ಯಮಂತ್ರಿಗಳು ತಮ್ಮ ಮೇಲೆ ಬಂದಿರತಕ್ಕಂಥಾ ಆಪಾದನೆಗಳನ್ನು ರಕ್ಷಣೆ ಮಾಡುವುದಕ್ಕೋಸ್ಕರ ಸರ್ಕಾರಿ ವಕೀಲರುಗಳನ್ನು ಬಳಸಿಕೊಂಡಿರುವುದು ಸರಿಯೇ? ತಪ್ಪೇ? ಎಂಬುದು. ಮತ್ತೊಂದು ಸರ್ಕಾರಿ ವಕೀಲರು ಸಾರ್ವಜನಿಕರ ಹಣವನು ತೆಗೆದುಕೊಳುತ್ತಿದ್ದಂತಹವರು ಒಬ್ಬ ಖಾಸಗಿ ವ್ಯಕ್ತಿಯ ಮೇಲೆ ಆಪಾದನೆಗಳು ಇದ್ದಾಗ ಅವರ ನೆರವಿಗೆ ಹೋಗಬೇಕೆ? ಬೇಡವೇ? ಎಂಬುದು. ಬಳಸಿಕೊಂಡಿದ್ದೂ ತಪ್ಪು ಬಳಕೆಯಾದವರದ್ದೂ ತಪ್ಪು. ಆ ಮಾತು ಬೇರೆ, ಗ್ರೋವರ್ ಆಯೋಗದ ಮುಂದೆ ಶ್ರೀಮಾನ್ ದೇವರಾಜ ಅರಸುರವರನ್ನು ರಕ್ಷಣೆ ಮಾಡುವುದಕ್ಕೋಸ್ಕರ ಹಾಜರಾಗಿರತಕ್ಕಾಂಥಾ ವಕೀಲರುಗಳು ಎಷ್ಟು? ಅವರಿಗೆ ಇದುವರೆಗೂ ಎಷ್ಟು ದುಡ್ಡು ಕೊಟ್ಟಿದೀರಿ?

SRI L. G. HAVANUR.—Sir, with my briefest entry into this August House from what I have noticed I am confirmed in my view that some of the Hon'ble Members reveal to much interest in cases or other things that concerns Mr. Devaraj Urs. I used to read in the papers that some unnecessary questions used to b raised and discussion used to be carried on unabated sometimes making irrelevant and unwanted remarks against the Chief Minister. My feeling is that my impression which I had before becoming a member of the other House came to be confirmed while listening to some of the speeches now made by the Members. Rule 312 does not relate to...

ಶ್ರೀ ಮಳ್ಳೂರು ಆನಂದ ರಾವ್.—ಮಾನ್ಯ ಮಂತ್ರಿಗಳು ಅವರು ಈ ಮನೆಯ ಅಥವಾ ಮೇಲ್ಮನೆಯ ಸದಸ್ಯರಾಗುವುದಕ್ಕೆ ಮುಂಚೆ ಪತ್ರಿಕೆಗಳಲ್ಲಿ ಅವರು ಓದಿದಂತಹ ವಿಚಾರಗಳ ಆಧಾರದ ಮೇಲೆ ಈಗ ಇಲ್ಲಿರತಕ್ಕಂಥ ಎರಡು ಮನೆಯ ಸದಸ್ಯರ ಮೇಲೆ ಆಪಾದನೆ ಮಾಡುತ್ತಿದ್ದಾರೆ. It is a breach of privilege. ಅವರು ಮುಂದುವರಿದು ಮಾತನಾಡುತ್ತಾ unabated and irrelevant ಎಂಬುದಾಗಿ ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ರೂಲ್ ೩೧೨ರ ಪ್ರಕಾರ ಸೂಚನೆ ಕೊಟ್ಟಿರುವವನು ನಾನು. ಮಾನ್ಯ ಮಂತ್ರಿಗಳಿಗೆ ಇರತಕ್ಕಂಥ ಮೂರು ತಿಂಗಳ ಆಧಾರದ ಮೇಲೆ ಕೆಲವು ಸದಸ್ಯರು ಮುಖ್ಯ ಮಂತ್ರಿಗಳ ತೇಜೋವಧೆ ಮಾಡುತ್ತಿದ್ದಾರೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಸವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಮಂತ್ರಿಗಳು ಒಬ್ಬ ಸದಸ್ಯರ ಬಗ್ಗೆ ಅಷ್ಟು ದೂರ ಹೋಗಿ ಅಷ್ಟು ಲಘುವಾಗಿ ಮಾತನಾಡುವುದು ಸರಿಯಲ್ಲ ಎಂಬುದಾಗಿ ತಮ್ಮ ಮೂಲಕ ನಿವೇದನೆ ಮಾಡಿಕೊಳ್ಳುತ್ತೇನೆ. ನನ್ನ ಭಾಷಣದಲ್ಲಿ ಮುಖ್ಯಮಂತ್ರಿಗಳನ್ನು ತೇಜೋವಧೆ ಮಾಡಿಲ್ಲ ಸರ್ಕಾರ ಬಡ ಬೋರೇಗೌಡ ಕೊಡತಕ್ಕಂಥ ೮೦೦ ಕೋಟಿ ರೂಪಾಯಿಗಳನ್ನು.........

ಶ್ರೀ ಎಲ್. ಜಿ. ಹಾವನೂರು.—ಮುಖ್ಯಮಂತ್ರಿಗಳಿಗೆ ತೇಜೋವಧೆ ಮಾಡಿದರು ಎನ್ನುವ ಶಬ್ದವನ್ನು ನಾನು ಬಳಸಲಿಲ್ಲ.

SRI H. D. DEVE GOWDA.—If you want to show your extra loyalty to Sri Devaraj Urs, I am not going to come in the way of exhibiting your extra loyality to Sri Devaraj Urs

SRI L. G. HAVANUR.—I am loyal, but you cannot raised it here. This is not an occasion. I have got to be loyal.

(Uproar by Opposition Members)

ಶ್ರೀ ಜೆ. ಎಚ್, ಪಟೇಲ್. – ವಿಧಾನ ಸಭೆ ಇದು, ಕಾಂಗ್ರೆಸ್ ಪಾರ್ಟಿ ಆಫೀಸಲ್ಲ. *** ಎಂದು ಮಾನ್ಯ ಸದಸ್ಯರನ್ನೇ ಪ್ರಶ್ನೆ ಮಾಡುವುದು ಸರಿಯೇ ಹಾಗೆ ಮಾನ್ಯ ಮಂತ್ರಿಗಳವರು ಮಾತನಾಡ ಬಹುದೇ?

(ಮಧ್ಯೆ ಹಲವಾರು ಸದಸ್ಯರುಗಳು ಮಾತನಾಡಲು ಎದ್ದು ನಿಂತುಕೊಂಡರು ಆಗ...)

ಚೇರ್ಮನ್‌ರವರು. – ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ ಮಾನ್ಯ ಸದಸ್ಯರು ಏನು ಮಾತನಾಡಿದ್ದಾರೆ ಎಂಬುದನ್ನು ಕಡತದಿಂದ ನೋಡಿ ತಿಳಿದುಕೊಳ್ಳೋಣ.

SRI M. V. RAJASEKHARAN.—I rise on a point of order, Sir. The Law Minister is supposed to respect the dignity of the House and also follow the rules of procedure. Now can the Hon'ble Law Minister directly address the Hon'ble Member

(Interruptions)

ಶ್ರೀ ಸಿ. ಎಂ. ಇಬ್ರಾಹಿಂ.—ಆ ಪದವನ್ನು ಕಿತ್ತು ಹಾಕಿಸಿ......

ಛೇರ್ಮನ್‌ರವರು.—ವಿಧಾನ ಸಭೆಯಲ್ಲಿ ಕಾರ್ಯಕಲಾಪಗಳು ಎಷ್ಟು ಗಂಭೀರವಾಗಿ, ಘನತೆಯಿಂದ ನಡೆಯಬೇಕು ಎನ್ನುವುದರ ಬಗ್ಗೆ ತಮಗೆಲ್ಲಾ ನಾನು ಉಪದೇಶ ಮಾಡಬೇಕಾದ ಅವಶ್ಯಕತೆ ಇಲ್ಲ......

ಶ್ರೀ ಮಳ್ಳೂರು ಆನಂದರಾವ್.—ದಯವಿಟ್ಟು ಮಂತ್ರಿಗಳವರ ಕಡೆಗೆ ತಿರುಗಿಗೊಂಡು ಹೇಳಿ, ನಮಗೆ ಏತಕ್ಕೆ ಹೇಳುತ್ತೀರಿ?

ಚೇರ್ಮನ್‌ರವರು.—ಮನವಿ ಮಾಡಿಕೊಳ್ಳತಕ್ಕಂಥ ಕಾಲದಲ್ಲಿ ನೀವು ಈ ಕಡೆಗೆ ಒತ್ತಟ್ಟಿಗೆ ಹೆಚ್ಚಿಗೆ ಜನ ಕೂತಿರುವುದರಿಂದ ಹೇಳುತ್ತಿದ್ದೇನೆ ಅಷ್ಟೆ. ತಾವೆಲ್ಲಾ ಅರ್ಥ ಮಾಡಿಕೊಂಡಿದ್ದೀರಿ, ನಿಮಗೆ ಗೊತ್ತಿಲ್ಲದೇ ಇರತಕ್ಕಂಥ ವಿಚಾರವಿಲ್ಲ. ನಾವು ಇಲ್ಲಿ ಒಂದು ವೇಳೆ ಮಾನ್ಯ ಮಂತ್ರಿಗಳವರೇ ಆಗಲೀ, ಸದಸ್ಯರೇ ಆಗಲೀ ಮಾತನಾಡುವಾಗ, ತಮ್ಮ ಭಾವನೆಯನ್ನು ವ್ಯಕ್ತಪಡಿಸುವಾಗ ತಪ್ಪನ್ನು ಮಾಡುವ ಅವಕಾಶ ಉಂಟು ಆದರೆ ಅದನ್ನೇ ಜಗಳದ ರೀತಿಯಲ್ಲಿ ತೆಗೆದುಕೊಳ್ಳುವುದು ಸರಿಯಲ್ಲವೆಂದು ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಮಂತ್ರಿಗಳವರು ಈ ರೀತಿ ಹೇಳತಕ್ಕಂಥದ್ದು ಇದು ಮೊದಲನೆಯ ಸಲವಲ್ಲ. ಮೊನ್ನೆ ದಿವಸ ಮಾನ್ಯ ಶ್ರೀ ಅಜೀಜ್ ಸೇಠ್‌ರವರು ಇದೇ ರೀತಿ ಮಾತನಾಡಿದರು ಅಂತ ಹೇಳಿ ಅದನ್ನು ತೆಗೆಸಿ ಹಾಕಿದಿರಿ. ಇವತ್ತು ಮಾನ್ಯ ಕಾನೂನು ಮಂತ್ರಿಗಳವರು ಉಪಯೋಗಿಸಿರುವ ಪದಕ್ಕಾಗಿ ಅಪಾಲಜಿಯನ್ನು ಕೇಳಬೇಕಾಗುತ್ತದೆ. ನಾವು ಇಲ್ಲಿ ಆರಿಸಿ ಬಂದಿರತಕ್ಕವರು ನಾಮಕರಣ ಹೊಂದಿರತಕ್ಕವರು ಅಲ್ಲ.

ಚೇರ್ಮನ್‌ರವರು.—ಕಾರ್ಯಕಲಾಪಗಳನ್ನು ನಡೆಸತಕ್ಕ ಕಾಲದಲ್ಲಿ ನಾವು ವಿಧಿ ನಿಯಮಗಳನ್ನು ಅನುಸರಿಸಿ ನಡೆದುಕೊಂಡು ಹೋಗಬೇಕಾಗುತ್ತದೆ. ಒಂದು ವೇಳೆ ನಾವು ಯಾವುದೋ ಉದ್ವೇಗ ಪೂರಿತವಾಗಿ ಮಾತನಾಡಿರುತ್ತೇವೆ, ಅದನ್ನು ಇಲ್ಲಿ ನಾವು ನಾವೇ ಸರಿಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೆ ಯಾರೂ ಬಂದು ಹೇಳುವ ಹಾಗಿಲ್ಲ.

SRI M. V. RAJASEKHARAN.—Sir, I would like to know whether the Hon. Minister can directly address a member and particularly use the unparliamentary words *** Can he address these wores directly to another member of this House and bring down the dignity of this House? I would like to have a ruling from you, Sir. If those words are unparliamentary I would request you to expunge them from the records.

*** Word/words expunged as ordered by the Chair.

† ಶ್ರೀ ಜೆ. ಎಚ್. ಪಟೇಲ್.—ಒಬ್ಬ ಸದಸ್ಯರು, ಇನ್ನೊಬ್ಬ ಸದಸ್ಯರು ನೇರವಾಗಿ ಮಾತನಾಡಬಾರದು ಅದು ಎಲ್ಲರಿಗೂ ಗೊತ್ತಿರುವ ವಿಚಾರ. ನಾವು ಇಲ್ಲಿ ಕೆಲವೊಂದು ಸಾರಿ ಮಾತನಾಡುತ್ತೇವೆ. ಆದರೆ ಇಲ್ಲಿ it is not the letter of the rule that is important but it is the spirit that is important. ಆದರೆ ನಾವು ಇಲ್ಲಿ ಸಭೆಯ ಘನತೆ ಗೌರವವರಿತು ಅದರಂತೆ ನಡೆದುಕೊಂಡು ಹೋಗಬೇಕಾಗುತ್ತದೆ. ಆದರಂತೆ ನಾವು ಇಲ್ಲಿಗೆ ಬರುವಾಗ ಪ್ರತಿಜ್ಞೆ ಮಾಡಿಕೊಂಡು ಬಂದಿರುತ್ತೇವೆ. ಮಾನ್ಯ ಮಂತ್ರಿಗಳವರು ಹೇಳುವಾಗ ಅದನ್ನೇ ಬೇರೆ ಭಾಷೆಯಲ್ಲಿ ಹೇಳಬಹುದಾಗಿತ್ತು. ಕೆಲವರಿಗೆ ಆ ರೀತಿ ಅಭ್ಯಾಸವಿದೆ, "ನಾನು ಓದಿಕೊಂಡಿದ್ದೆ, ಇಲ್ಲಿಗೆ ಬಂದ ಮೇಲೆ ಖಚಿತವಾಯಿತು" ಎಂದು ಈ ರೀತಿಯಾಗಿ ಹೇಳುವುದು ಅನಾವಶ್ಯಕ. ಮಾನ್ಯ ಸದಸ್ಯರಾದ ಶ್ರೀ ದೇವೇಗೌಡರವರು ಹೇಳುವಾಗ, ನೀವು ಈ ರೀತಿಯಾಗಿ ಅನಾವಶ್ಯಕವಾಗಿ ಈ ತರಹ ಸಂಪ್ರದಾಯ ವಿರುದ್ಧವಾಗಿ ಹೋಗತಕ್ಕಂಥದ್ದು, ನಿಮ್ಮ ಲಾಯಲ್‌ಟಿ ತೋರಿಸುವುದು ಬೇಡ ಎಂದು ಹೇಳಿದರೆ ಆದಕ್ಕೆ ಮಾನ್ಯ ಮಂತ್ರಿಗಳವರು ಆ ರೀತಿ ಉತ್ತರ ಕೊಡುವುದು ಕ್ರಮವೇ? ನಾನು ಮೊದಲನೆಯ ದಿವಸವೇ ಹೇಳಿದೆ, ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡಿದ್ದೇವೆ, ದಯವಿಟ್ಟು ನಯ, ವಿನಯ ಸಂಪ್ರದಾಯ ಶಿಸ್ತು ನಂತೆ ಸರ್ಕಾರದವರು ನಡೆದುಕೊಂಡರೆ ನಾವು ನಿಮಗೆ ತಲೆ ಬಾಗುತ್ತೇವೆಂದು, ನೀವು ಏನಾದರೂ ದಾರಿ ಬಿಟ್ಟರೆ, ಮೇ ಪಾರ್ಲಿಮೆಂಟ್ಸ್ ರಿಪೋರ್ಟ್‌ನಲ್ಲಿ ಒಂದು ಕಡೆ ಹೇಳಿದ್ದಾರೆ. ವಿರೋಧ ಪಕ್ಷದವರ ಒಂದು ಟನ್ ಅಶಿಸ್ತು, ಆಳುವ ಪಕ್ಷದವರ ಒಂದು ಔನ್ಸ್ ಅಶಿಸ್ತಿಗೆ ಸಮವೆಂದು ಹೇಳಿದ್ದಾರೆ. ಇಲ್ಲಿ ಒಂದು ಟನ್ ಅಶಿಸ್ತು ಆದರೆ ನಾವು ಸುಮ್ಮನೇ ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ? *** ಎಂದು ಪ್ರಶ್ನೆ ಮಾಡಿದರೆ ಹೇಗೆ ನಾವು ಏನು ಬೇಕಾದರೂ ಮಾಡಬಹುದು, ಆ ರೀತಿ ಆಗುವುದು ಬೇಡವೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಚೇರ್ಮನ್‌ರವರು.—ಕಡತವನ್ನು ನೋಡುತ್ತೇನೆ ಅಂಥಾದ್ದು ಏನಾದರೂ ಬಳಸಬಾರದಂತ ಪದವನ್ನು ಬಳಸಿದ್ದರೆ ಖಂಡಿತವಾಗಿಯೂ ಕಡತದಿಂದ ತೆಗೆದು ಹಾಕುವುದಕ್ಕೆ ಅಜ್ಞೆ ಮಾಡುತ್ತೇನೆ ಎನ್ನತಕ್ಕ ಭರವಸೆಯನ್ನು ಕೊಡುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಹತ್ತಾರು ಸಲವಾಯಿತು, ಹೇಳಬಾರದ್ದನ್ನು ಹೇಳುತ್ತಲೇ ಇರುತ್ತಾರೆ ಆ ಮೇಲೆ ಎಕ್ಸ್‌ಪಂಜ್ ಮಾಡಿಸುತ್ತಲೇ ಇದ್ದೀರಿ...

ಚೇರ್ಮನ್‌ರವರು.—ದಯವಿಟ್ಟು ಕುಳಿತುಕೊಳ್ಳಿ...ತಪ್ಪು ಏನಾಗಿದೆ ಎನ್ನುವುದನ್ನು ಪತ್ತೆ ಹಚ್ಚಬೇಕಾಗಿದೆ. ಉದ್ದೇಶಪೂರ್ವಕವಾಗಿ ಯಾರು ತಪ್ಪು ಮಾಡುವುದಿಲ್ಲ I have already made it clear that I would go through the records and if I find that the Hon. Minister has used any language which is unbecoming of him. I will see that it is removed from the records.

Sri C. M. Arumugham.—Sir, I would request you to give your ruling at the end. The question is not whether it is parliamentary or not It is a very provocative work. It is not proper to question a member *** I have been seeing Sri Havanur and he has been conducting himself in a most dignified way. I do not know how he lost his temper by addressing Sri Deve Gowda in that way. Apart from being a member, he is also the President of the Janatha Party and he was the Opposition Leader before. He knows that. In order to avoid this controversy and tension, I would appe l to Sri Havanur to either express regret or withdraw those words so that we can go on with the other business. Nothing will be lost by his doing so.

---

* * * Word/words expunged as ordered by the Chair.

5-30 P.M.

SRI A. LAKSHMISAGAR.—On a point of order. The points that were raised under rule 312 were specific. No member on this side of the House went out of the way in making out his point. The Hon. Minister while starting his reply, he started attacking on the proceedings of the Grover Commission and on the conduct of the Advocates appearing before the Grover Commission. I may tell incidentally that I am one of the Advocates appeared for the Memorialists both before the Iqbal Hussain Commission and before the Grover Commission. It is also a reflection on the lawyers who appeared before them. He further stated that the same trend is reflected in the speeches made by the members of this House. Is this in order? Are we sitting in judgement over the conduct of Grover Commission? Is it proper for the Minister for Law and Social Welfare who has been a lawyer himself and a Professor of Law to indulge in such remarks? Is it proper for him?

SRI L. G. HAVANUR.—With utmost respect to my learned friend I feel that I should first reply to the objection raised by Sri Lakshmisagar. I have never made a reference to the Grover Commission. It is his imagination.

HON MEMBERS.—Please see the records.

SRI L. G. HAVANUR.—I remember I had no occasion to ref r to the Grover Commission.

MR. CHAIRMAN.—My memory may be faulty. If I can remember I don't think that the Hon. Minister made any reference to the proceedings of the Grover Commission. If that is so, it is a different matter.

SRI A. LAKSHMISAGAR. He said "I have read the proceedings of the Grover Commission in the press and the way in which the proceedings were conducted......" Similar words were used.

† ಶ್ರೀ ಬಿ.ವಿ. ಕಕ್ಕಿಲಾಯ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಲಕ್ಷ್ಮಿಸಾಗರ್‌ರವರು ಎತ್ತಿರತಕ್ಕಂಥ ಪ್ರಶ್ನೆ ಬೇರೆ, ಆದರೆ ಮಾನ್ಯ ಸದಸ್ಯರಾದ ಶ್ರೀ ಆರ್ಮುಗಂರವರು ಒಂದು ಮಾತನ್ನು ಹೇಳಿದ್ದಾರೆ, ಅದು ಏನು ಎಂದರೆ ಮಾನ್ಯ ಸಚಿವರು ಏನು ಪದವನ್ನು ಬಳಸಿದ್ದಾರೆ ಆ ಶಬ್ದದ ಬಗ್ಗೆ ವ್ಯಸನ ಪಡಬೇಕೆಂದು ಮತ್ತು ಬಳಕೆ ಮಾಡಿರತಕ್ಕಂಥ ಆ ಮಾತನ್ನು ವಾಪಸ್ ಪಡೆಯುವ ಮೂಲಕ ಸಭೆಗೆ ರಿಗ್ರೆಟ್ ಸೂಚಿಸಬೇಕೆಂದು ಹೇಳಿದ್ದಾರೆ, ಆದರೆ ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮಿಸಾಗರ್‌ರವರು ಎತ್ತಿರತಕ್ಕಂಥ ಪ್ರಶ್ನೆಯೇ ಬೇರೆ ? ಆದ್ದರಿಂದ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ "***" ಎಂದು ಏನು ಹೇಳಿದ್ದಾರೆ ಅದು ಸರಿಯಾದ್ದುದು ಅಲ್ಲವೆನ್ನುವುದು ನಮ್ಮ ಭಾವನೆ ಎಂದು ಮಾನ್ಯ ಆರ್ಮುಗಂರವರು ಹೇಳಿರುವುದರಿಂದ ಮಾನ್ಯ ಮಂತ್ರಿಗಳು ವಿಷಾದ ವ್ಯಕ್ತಪಡಿಸಲಿ ಎನ್ನುವುದು ನಮ್ಮೆಲ್ಲರ ಭಾವನೆ.

*** Word/words expunged as ordered by the Chair.

(MR. SPEAKER in the Chair)

SRI L.G. HAVANUR.—It is a fact that I did question by saying "***" to question my loyalty to Sri Devaraj Urs" when Sri Deve Gowda made an attempt to tell me "why I show that I am extra loyal to Sri Devaraj Urs" My object of questioning was he being the President of an opposition party what right has he to say that I should not be loyal to Sri D. Devaraj Urs. It is with that spirit that I said it.

HON. MEMBERS.—No, no.

(*Interruptions*)

SRI B.B. SAYANAK.—I rise on a point of order.

MR. SPEAKER.—There is no point of order when four members are standing. ಮಾನ್ಯ ಸದಸ್ಯರು ನಾಲ್ಕು ಜನರು ಒಟ್ಟಿಗೆ ನಿಂತುಕೊಂಡರೆ ಹೇಗೆ ? ನಾನು ಯಾರನ್ನು ಮಾತನಾಡಿ ಎಂದು ಹೇಳಬೇಕು ? You are misbehaving.

ಶ್ರೀ ಜೆ.ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಆರ್ಮುಗಂರವರು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಏನು "***" ಎಂದು ಹೇಳಿದ್ದಾರೆ ಅದು ಸರಿಯಾದುದಲ್ಲ. ಜೊತೆಗೆ ಪಕ್ಷದ ಬಗ್ಗೆ ಅವರು ಹೇಳುತ್ತಿದ್ದಾರೆ. ಅವರು ಕಾಂಗ್ರೆಸ್ ಪಕ್ಷದವರು ಇರಬಹುದು, ನಾವು ಜನತಾ ಪಕ್ಷದವರು ಇರಬಹುದು. ಅದು ಹೊರಗಡೆ. ಈ ಸದನದಲ್ಲಿ ಅವರು ಸರ್ಕಾರ ನಡೆಸತಕ್ಕಂಥ ಪಕ್ಷದವರು, ನಾವು ವಿರೋಧ ಪಕ್ಷದವರು ಅಷ್ಟೆ. ಅವರು ಎಲ್ಲಿಯವರೆಗೆ ಆಡಳಿತ ನಡೆಸುತ್ತಾರೋ ಅಲ್ಲಿಯವರೆಗೆ ಈ ಸದನದ ಸದಸ್ಯರು ಕೇಳಿದ್ದಕ್ಕೆ ಉತ್ತರ ಕೊಡಬೇಕಾಗುತ್ತದೆ. ನಾವು ಪ್ರಶ್ನೆ ಕೇಳುವ ಹಕ್ಕು ನಮಗೆ ಇದೆ. ಅವರು ಎಲ್ಲಿಯವರೆಗೆ ಮಂತ್ರಿಗಳಾಗಿರುತ್ತಾರೆ ಅಲ್ಲಿಯವರೆಗೆ ನಮಗೆ ಉತ್ತರ ಕೊಡಬೇಕು. ಆದ್ದರಿಂದ ಅವರು ರಿಗ್ರೆಟ್ ಹೇಳಿದರೆ ಈ ಪ್ರಶ್ನೆ ಬಗೆಹರಿಯುತ್ತದೆ.

ಅಧ್ಯಕ್ಷರು.—ಮಾನ್ಯ ದೇವೇಗೌಡರು ಎಂತಹ ಪದ ಬಳಸಿದ್ದಾರೆಂದು ಮಾನ್ಯ ಸಚಿವರು ಹೇಳುತ್ತಾರೆ ಅದನ್ನು ತರಿಸಿ ನೋಡುತ್ತೇನೆ. ಹಾಗೆಯೇ ಮಾನ್ಯ ಸಚಿವರು ಏನು ಶಬ್ದವನ್ನು ಬಳಸಿದ್ದಾರೆಂದು ಮಾನ್ಯ ದೇವೇಗೌಡರು ಹಾಗೂ ಮಾನ್ಯ ಇತರ ಸದಸ್ಯರು ಹೇಳಿದ್ದಾರೆ ಅದನ್ನು ನಾನು ತರಿಸಿ ನೋಡುತ್ತೇನೆ.

(ಅನೇಕ ಮಂದಿ ಸದಸ್ಯರು ಒಟ್ಟಿಗೆ ನಿಂತು ಮಾತನಾಡುತ್ತಿದ್ದರು. ಹಾಗೂ ಪ್ರತಿಭಟಿಸಿದರು).

ಮಾನ್ಯ ಸದಸ್ಯರು ಈ ರೀತಿ ಒಟ್ಟಿಗೆ ಇಷ್ಟು ಜನರು ನಿಂತು ಮಾತನಾಡುವುದಾದರೆ ಇದು ಸಭೆಯನ್ನು ನಡೆಸುವುದಕ್ಕೆ ಸಾಧ್ಯವೇ ? ಸಭೆಗೆ ಮರ್ಯಾದೆ ಹಾಗೂ ಗೌರವ ತರುವಂತಹುದೇ ? ರೂಲ್ಸ್ ಪ್ರಕಾರ ತಾವು ನಡೆದುಕೊಳ್ಳುತ್ತಿದ್ದೀರಾ ? ದಯಮಾಡಿ ಒಬ್ಬೊಬ್ಬರು ನಿಂತು ಮಾತನಾಡಿದರೆ ನನಗೆ ಅವಕಾಶ ಮಾಡಿಕೊಡಲು ಅನುಕೂಲವಾಗುತ್ತದೆ. ದಯಮಾಡಿ ಎಲ್ಲರೂ ಕುತೂಕೊಳ್ಳಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ. ಈ ರೀತಿ ಒಟ್ಟಿಗೆ ೧೦ ಜನರು ನಿಂತು ಮಾತನಾಡಿದರೆ ನಾನು ಏನು ಹೇಳಬೇಕು ? ಅದನ್ನು ತಾವೇ ಹೇಳಿ.

ಶ್ರೀ ಯು.ಜಿ. ಬೋರ್ಕರ್.—ಮಾನ್ಯ ಮಂತ್ರಿಗಳು ಈ ಸದನದ ಒಬ್ಬ ಸದಸ್ಯರನ್ನು "***" ಎಂದು ಕೇಳುತ್ತಾರೆ ಎಂದರೆ ನಾವು ಇಲ್ಲಿ ಸುಮ್ಮನೆ ಕೂಡುವುದಕ್ಕೆ ಬಂದಿದ್ದೇವೆಯೋ ?

*** Word/words expunged as ordered by the Chair.

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಹೀಗೆ ಒಟ್ಟಿಗೆ ನಿಂತು ಮಾತನಾಡಿದರೆ ಪತ್ರಿಕೆಯುವರು ಏನು ಭಾವನೆ ಮಾಡಿಕೊಳ್ಳುತ್ತಾರೆ ಹಾಗೂ ಇದರಿಂದ ಸಾರ್ವಜನಿಕರಲ್ಲಿ ನಮ್ಮ ಬಗ್ಗೆ ಏನು ಭಾವನೆ ಮೂಡುತ್ತದೆಂದು ತಾವೇ ಯೋಚನೆಮಾಡಿ ?

ಶ್ರೀ ಸಿ.ಎಂ. ಇಬ್ರಾಹಿಂ.—ನಾನು ಕ್ರಿಯಾಲೋಪ ಎತ್ತುತ್ತೇನೆ, ಮಾನ್ಯ ಅಧ್ಯಕ್ಷರೆ, ಪ್ರಥಮವಾಗಿ ಮಾನ್ಯ ಮಳ್ಳೂರು ಆನಂದರಾವ್‌ರವರು ಎದ್ದಾಗ ತಾವು ಏನು ಹೇಳಿದಿರಿ ಇದು ನಿಮಗೆ "ಮರ್ಯಾದೆಯೇ" ಎಂದು ಹೇಳಿದ್ದೀರಿ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಹಾಗಾದರೆ ನಾವು ಮರ್ಯಾದೆ ಇಲ್ಲದೆಯೇ ಬಂದಿದ್ದೇವೆಯೆ ? ನಾವು ಆ ರೀತಿ ಮರ್ಯಾದೆ ಇಲ್ಲದೆ ಬಂದಿಲ್ಲ. ನಾವು ಜನಗಳಿಂದ ಆರಿಸಿ ಇಲ್ಲಿಗೆ ಬಂದಿದ್ದೇವೆ. ನಾವು ಮಾತನಾಡಬೇಕಾದರೆ ನಮ್ಮ ಮುಂದೆ ಕಾನೂನಿನ ಚೌಕಟ್ಟು ಇದೆ; ಹಾಗೆಯೇ ತಮಗೂ ಮಾತನಾಡುವುದಕ್ಕೆ ಕಾನೂನಿನ ಚೌಕಟ್ಟು ಇದೆ. ಅದನ್ನು ಮೀರಿ ನಾವು ಹೋಗಬಾರದು, ತಾವೂ ಹೋಗಬಾರದು.

ಅಧ್ಯಕ್ಷರು.—ನಾನು ಮಾತನಾಡುವಾಗ ಅನ್‌ಪಾರ್ಲಿಮೆಂಟರಿ ಪದವನ್ನು ಏನಾದರೂ ಉಪಯೋಗಿಸಿದ್ದರೆ ನಾನು ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರು ಇದ್ದೇನೆ. ಆದರೆ ನೀವು ೫–೬ ಜನರು ಒಮ್ಮೆಲೇ ನಿಂತುಕೊಂಡು ಮಾತನಾಡಿದರೆ ಹೇಗೆ ?

ಶ್ರೀ ಸಿ.ಎಂ. ಇಬ್ರಾಹಿಂ.—ಅದಕ್ಕೆ ತಾವು 'ಮರ್ಯಾದೆ' ಇದೆಯೇ ಅಂತ ಕೇಳೋದೆ ! ತಾವು ಸಹ ಕಾನೂನಿನ ಚೌಕಟ್ಟಿನಲ್ಲಿ ಮಾತನಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಆಮೇಲೆ ತಾವು ನನ್ನ ಪಾಯಿಂಟ್ ಆಫ್ ಆರ್ಡರ್‌ಗೆ ರೂಲಿಂಗ್ ಕೊಡಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ರೂಲ್ ೩೧೨ರ ಪ್ರಕಾರ ಎತ್ತಿರುವ ವಿಷಯದ ಮೇಲೆ ಇಲ್ಲಿ ವಾದವಿವಾದಗಳು ನಡೆಯುತ್ತಿವೆ. ಶ್ರೀಮಾನ್ ಹಾವನೂರ್‌ರವರು ಮಾನ್ಯ ದೇವೇಗೌಡರ ಒಂದು ಪ್ರಶ್ನೆಗೆ "***" ಎಂದು ಹೇಳಿದರು. ಆ ರೀತಿ ನೇರವಾಗಿ ಹೇಳತಕ್ಕಂಥ ಸಂಪ್ರದಾಯ ಈ ಸಭೆಯಲ್ಲಿ ಇಲ್ಲ. ಅದು ಸರಿಯಲ್ಲ. ಅವರು ಆ ಬಗ್ಗೆ ಮಾತನಾಡುತ್ತಿದ್ದರು. ಅಷ್ಟರೊಳಗೆ ಆ ಕಡೆಯ ಎಲ್ಲಾ ಮಾನ್ಯ ಸದಸ್ಯರೂ ಎದ್ದು ನಿಂತುಕೊಂಡರು.

ಶ್ರೀ ಎಲ್.ಜಿ. ಹಾವನೂರ್.—ಅವರೇ ನೇರವಾಗಿ ಮಾತನಾಡುತ್ತಿದ್ದರು. ಇದರಲ್ಲಿ ನನ್ನದೇ ತಕರಾರು ಎನ್ನುವ ರೀತಿಯಲ್ಲಿ ತೆಗೆದುಕೊಳ್ಳುತ್ತಿದ್ದಾರೆ; ಇದೇನು ದುರ್ದೈವ !

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಯವರು ಮಾತನಾಡುತ್ತಿದ್ದರು. ಆಗ ೫–೬ ಜನ ಆ ಕಡೆಯ ಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡಿದರು, ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಇರುವಾಗ ಅವರ ಗೌರವಕ್ಕೆ ಧಕ್ಕೆ ಬರುವ ರೀತಿಯಲ್ಲಿ ಮಾನ್ಯ ಸದಸ್ಯರು ವರ್ತನೆ ಮಾಡಿದರು. ಆದ್ದರಿಂದ ನಾನು ಅವರಲ್ಲಿ ಕೇಳಿಕೊಳ್ಳುವುದೇನೆಂದರೆ ಮಾನ್ಯ ಅಧ್ಯಕ್ಷರ ಗೌರವಕ್ಕೆ ಧಕ್ಕೆ ಬರುವ ರೀತಿಯಲ್ಲಿ ನಾವೂ ಕೂಡ ಮತ್ತು ಅವರೂ ಕೂಡ ವರ್ತನೆ ಮಾಡಬಾರದು ಎಂದು ಕೇಳಿಕೊಳ್ಳುತ್ತೇನೆ. ಮಾನ್ಯ ಇಬ್ರಾಹಿಂರವರು ಮಾತನಾಡುವಾಗ ಎರಡು ಕೈಗಳನ್ನು ಸೊಂಟದ ಮೇಲೆ ಇಟ್ಟು ಏನೋ ಹೇಳಿದರು. ಇದು ಯಾವ ರೀತಿ ಅರ್ಥವಾಗುತ್ತದೆ !

ಶ್ರೀ ಸಿ.ಎಂ. ಇಬ್ರಾಹಿಂ.—ಮಾತನಾಡುವಾಗ ಕೈಯನ್ನು ಸೊಂಟದ ಮೇಲೆ ಇಟ್ಟುಕೊಳ್ಳಬಾರದು ಎಂದು ಏನಾದರೂ ಇದೆಯೇ ? ಏತಕ್ಕೆ ತಾವು ಹಾಗೆ ಮಾತನಾಡುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ.—ಈ ಬಗ್ಗೆ ಎರಡು ಗಂಟೆ ಆಗಲಿ ನಾವು ಸಮಾಧಾನವಾಗಿ ಮಾತನಾಡೋಣ. ಒಂದು ವಿಷಯದ ಬಗ್ಗೆ ಎರಡು ಗಂಟೆ ಮಾತನಾಡುವುದಕ್ಕೆ ಅವಕಾಶ ಇದ್ದರೂ ಅದು ಬೇರೆ ವಿಚಾರ. ಒಂದು ಪ್ರಶ್ನೆ ಕೇಳುವುದಕ್ಕೆ, ಒಂದು ಪಾಯಿಂಟ್ ಆಫ್ ಆರ್ಡರ್ ಕೇಳುವುದಕ್ಕೆ ಎಷ್ಟು ಸಮಯ ಕೊಡಬಹುದೋ ಅದಕ್ಕಿಂತ ಸ್ವಲ್ಪ ಹೆಚ್ಚೋ ಕಡಿಮೆಯೋ ಸಮಯವನ್ನು ಕೊಡಬಹುದೇ ಹೊರತು ರೂಲ್ ೩೧೨ರ ಕೆಳಗೆ ಈ ಬಗ್ಗೆ ಗಂಟೆಗಟ್ಟಲೆ ಮಾತನಾಡುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಸಭಾಧ್ಯಕ್ಷರ ಮೂಲಕ ಮಾನ್ಯ ಸದಸ್ಯರಲ್ಲಿ ಮತ್ತು ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳು

*** Word/words expunged as ordered by the Chair.

ತ್ತೇನೆ, ಈ ಸಭೆಯ ಗೌರವ ಮತ್ತು ನಮ್ಮ ಗೌರವವನ್ನು ಕಾಪಾಡಿಕೊಂಡು ಹೋಗುವುದಕ್ಕೆ ನಾವೆಲ್ಲರೂ ಒಪ್ಪಿದ್ದೇವೆ. ಅದರಂತೆ ತಾವೂ ಒಪ್ಪಿದ್ದೀರಿ. ಈಗ ಮುಂದಿನ ಸಭೆಯ ಕಾರ್ಯಕಲಾಪಗಳನ್ನು ದಯಮಾಡಿ ನಡೆಸಿಕೊಂಡು ಹೋಗಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್.—ಈಗ ಮಾನ್ಯ ಮಂತ್ರಿಯವರು ಮಾತನಾಡಲಿ, ಅವರಿಗೆ ಅವಕಾಶ ಕೊಡಿ.

ಶ್ರೀ ಬಾಬುರಾವ್ ದೇಶಪಾಂಡೆ.—ಮಾನ್ಯ ಸಭಾಧ್ಯಕ್ಷರೇ, ಈಗ ಇರತಕ್ಕಂಥ ಸಮಸ್ಯೆ ಏನೆಂದರೆ ಮಾನ್ಯ ಮಂತ್ರಿಯವರು ಉತ್ತರ ಕೊಡಬೇಕಾದರೆ ಬಳಸಿರತಕ್ಕಂಥ ಪದಗಳು ಸರಿಯಲ್ಲ. ಆದ್ದರಿಂದ ಈ ಸಭೆಯ ಗೌರವಕ್ಕೆ ಕುಂದು ಬಂದಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಆರ್ಮುಗಂರವರು ಸಹ ಮಾನ್ಯಮಂತ್ರಿಯವರು ಆ ರೀತಿ ಹೇಳಿರುವುದಕ್ಕೆ ವಿಷಾದ ವ್ಯಕ್ತ ಮಾಡಬೇಕು ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಯವರು ಅವರ ವಿಷಾದವನ್ನು ವ್ಯಕ್ತ ಮಾಡಿದರೆ ಈ ಸಭೆಗೆ ಗೌರವ ಬರುತ್ತದೆ ಮತ್ತು ಈ ಸಭೆಯ ಕಾರ್ಯಕಲಾಪಗಳು ಸುಗಮವಾಗಿ ನಡೆಯುತ್ತದೆ. ಮಾನ್ಯ ಮಂತ್ರಿಯವರು ಇದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಮಾನ್ಯ ಸಭಾಧ್ಯಕ್ಷರ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

SRI B.B. SAYANAK.—Sir, we must maintain the dignity and decorum of the House. The Hon'ble Minister for Law, while replying told Sri Deve Gowda "***". This is not correct on the part of the Law Minister. The Hon'ble Member Sri C.M. Arumugham requested the Law Minister to say a word of regret. That was only a request made by Hon'ble Member Sri Arumugham, and in all fairness the Law Minister should regret for what he said.

SRI L.G. HAVANUR.—Sir, my speech, my talk, my use of expressions are all known to this august House. I addressed the Hon'ble Member Sri Deve Gowda because I had the experience of some of the members standing and making speeches who are quite conversant with the Ministers. I have not departed from that practice at all. Even the use of my expression is not defamatory or unparliamentary. Therefore there is no question of any one of the members asking me to withdraw those words and there is no question of my withdrawing those words.

(ಈ ಸಮಯದಲ್ಲಿ ಮಾನ್ಯ ವಿರೋಧಪಕ್ಷದ ಸದಸ್ಯರಲ್ಲಿ ಕೆಲವರು ವಾಕ್‌ಔಟ್ ಮಾಡುವುದಕ್ಕೆ ಸಿದ್ಧರಾದುದನ್ನು ಮಾನ್ಯ ಜೆ.ಹೆಚ್. ಪಟೇಲರು ತಡೆದರು).

ಶ್ರೀ ಜೆ.ಹೆಚ್. ಪಟೇಲ್.—ಈಗ ನಾವು ಹೊರಗೆ ಹೋಗುವುದಿಲ್ಲ. ನಾವು ಹೊರಗೆ ಹೋಗುವುದಾದರೆ ಆ ಮಾತು ಬೇರೆ. ಆದರೆ ಅವರು ಯಾರೂ ಮಾತನಾಡುವುದಕ್ಕೆ ನಾವು ಬಿಡುವುದಿಲ್ಲ. ಇಲ್ಲಿ ಬಂದಿರತಕ್ಕಂಥ ಪ್ರಶ್ನೆ ಇಷ್ಟೆ, ಮಾನ್ಯ ಮಂತ್ರಿಯವರು ಬಳಸಿರತಕ್ಕಂಥ ಶಬ್ದ "***" ಅನ್‌ಪಾರ್ಲಿಮೆಂಟರಿ ಅಲ್ಲ. ಅದಕ್ಕೆ ಬೇಕಾದರೆ ನಾನು ದಾಖಲೆಯನ್ನು ತೆಗೆದುಕೊಂಡು ಬಂದು ಕೊಡುತ್ತೇನೆ ಈಗಲೇ ಸಮಯ ಕೊಟ್ಟರೆ ದಾಖಲೆಯನ್ನು ಕೊಡುತ್ತೇನೆ. ಅವರು ಬಳಸಿರತಕ್ಕಂಥ ಶಬ್ದ ಅನ್‌ಪಾರ್ಲಿಮೆಂಟರಿ ಅಲ್ಲದಿದಿದ್ದರೂ ಅವರು ಆ ಶಬ್ದವನ್ನು ಬಳಸಿರತಕ್ಕಂಥ ರೀತಿ ಬಹಳ ಪರಿಣಾಮಕಾರಿಯಾದುದಾಗಿದೆ. ಈ ಪರಿಣಾಮದ ದೃಷ್ಟಿಯಿಂದ ಆ ಶಬ್ದದ ಮಹತ್ವ ಏನು ಎಂಬುದು ಅವರಿಗೂ ಗೊತ್ತಿದೆ. ಅವರು ವಿದ್ವಾಂಸರು ಇದ್ದಾರೆ ಅವರಿಗೆ ಎಲ್ಲಾ ಗೊತ್ತಿದೆ. ಆದರೂ ಅವರಿಗೂ ತಾನು ಮಾಡಿದ್ದು ತಪ್ಪು ಎಂದು ಒಪ್ಪಿಕೊಳ್ಳತಕ್ಕಂಥ ಸೌಜನ್ಯ ಇಲ್ಲ.

* * * word/words expunged as ordered by the Chair.

SRI L. G. HAVANUR.—That is not the question. The objection is that my words were unparliamentary.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಮಂತ್ರಿಯವರು ವಿಷಾದವನ್ನು ವ್ಯಕ್ತಪಡಿಸಿದರೆ ಅದರಿಂದ ಅಗೌರವ ಮಾಡಿದ ಹಾಗೆ ಇಲ್ಲ, ಅವರು ಈ ಸಭೆಯ ಮಾನ್ಯ ಸದಸ್ಯರಿಗೋಸ್ಕರ ವಿಷಾದ ವ್ಯಕ್ತಪಡಿಸ ದಿದ್ದರೂ ಈ ಸಭೆಯ ಗೌರವಕ್ಕೋಸ್ಕರ ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. ಈ ಸಭೆಯ ಗೌರವಕ್ಕೆ ಚ್ಯುತಿ ಬರತಕ್ಕಂಥ ಸಂದರ್ಭ ಬಂದಿರುವುದರಿಂದ ಅವರು ಇಷ್ಟು ಕೆಲಸಮಾಡಬೇಕು ಎಂದರೆ ಅವರು ಅದನ್ನು ಮಾಡುತ್ತಾ ಇಲ್ಲ.

ಒಬ್ಬ ಮಾನ್ಯ ಸದಸ್ಯರು.—ಈ ಸಭೆಯ ಗೌರವಕ್ಕೆ ಚ್ಯುತಿಯಾಗಿಲ್ಲ.

ಶ್ರೀ ಎಂ. ಸಿ. ನಾಣಯ್ಯ.—ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧಪಕ್ಷದ ಸದಸ್ಯರಾದ ದೇವೇಗೌಡರು ಮಾತನಾಡತಕ್ಕಂಥ ಸಂದರ್ಭದಲ್ಲಿ ಅವರೂ ಕೂಡ If you want to be extra loyal to your Chief Minister ಎಂದು ಹೇಳಿದರು.

ಶ್ರೀ ಭಾವುರಾವ್ ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಈ ವಿಷಯ ಈಗಲೇ ತೀರ್ಮಾನವಾಗಲಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ, ಮತ್ತೆ ಇದರ ಬಗ್ಗೆ ಮಾನ್ಯ ಸದಸ್ಯರು ಚರ್ಚೆ ಮಾಡುವುದಾದರೆ ಈ ಸಮಸ್ಯೆ ಈಗ ಪರಿಹಾರವಾಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಚರ್ಚೆಗೆ ಆಸ್ಪದ ಮಾಡಿಕೊಡಬಾರದೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ದಯಮಾಡಿ ತಾವು ಕುಳಿತುಕೊಳ್ಳಿ. ಮಾನ್ಯ ನಾಣಯ್ಯನವರು ಈ ಬಗ್ಗೆ ಏನು ಹೇಳುತ್ತಾರೋ ಕೇಳೋಣ.

ಶ್ರೀ ಎಂ. ಸಿ. ನಾಣಯ್ಯ.—ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಬಹಳಷ್ಟು ಜನ ಚರ್ಚೆ ಮಾಡಿದ್ದಾರೆ. ಈ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ತಮ್ಮ ಅನುಮತಿ ಕೇಳಿ ಚರ್ಚೆ ಮಾಡುತ್ತಿದ್ದೇನೆ. ಇವತ್ತು ಕಾನೂನು ಮಂತ್ರಿಯವರು ಈ ಸಭೆಯಲ್ಲಿ ವಿಷಾದ ವ್ಯಕ್ತಪಡಿಸಬೇಕು ಎಂದು ಆ ಕಡೆಯ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಆದರೆ * * * ಎಂದು ಹೇಳಿರತಕ್ಕಂಥಾದ್ದು ಅನ್‌ಪಾರ್ಲಿಮೆಂಟರಿ ಅಲ್ಲವೇ, ಹೌದೇ ಎನ್ನತಕ್ಕಂಥಾದ್ದು ಈಗ ಇರತಕ್ಕಂಥ ಪ್ರಶ್ನೆ.

The context under which it has been used must be understood by the House. Whether it was the intention of a member to direct another member.

ಶ್ರೀ ಮಳೂರು ಆನಂದರಾವ್.—ಈಗ ಹೊಳೆಯುತ್ತಾ ಇದೆಯಾ ನಿಮಗಿದು? ಬೇರೆ ದಾರಿ ಕಾಣಲಿಲ್ಲವೆಂದು ಈಗ ಹೊಸದಾಗಿ ಇದನ್ನು ಹುಡುಕುತ್ತಿದ್ದೀರಾ?

ಶ್ರೀ ಎಂ. ಸಿ. ನಾಣಯ್ಯ.—ಹೊಸದೇನೂ ಇದರಲ್ಲಿಲ್ಲ. ಮಾನ್ಯ ದೇವೇಗೌಡರು "If he wants to be extra loyal to the Chief Minister." ಎಂದು ಹೇಳಿ Being a leader of the Janata Party, I do not want that regret. ಎಂದು ಹೇಳಿದ್ದಾರೆ.

(No No from the members of the Opposition)

What was the context under which the Law Minister made that statement? The context should be taken into consideration by this House. If the context itself was wrong then whatever followed also must be wrong. For this reason I say that there is nothing on the part of the Law Minister to regret.

---

* * * Word/words expunged as ordered by the Chair.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ, ಈಗ ಉದ್ಭವಿಸಿರುವ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ತಾವು ಸಹಕಾರ ನೀಡಬೇಕೆಂದು ಪ್ರಾರ್ಥನೆ. ಈ ಸಮಸ್ಯೆ ಬಗ್ಗೆ ಎರಡು ಕಡೆಯವರು ಬಹಳಷ್ಟು ವಿಪುಲವಾಗಿ ಚರ್ಚೆ ಮಾಡಿದ್ದಾರೆ; ಮತ್ತು ಶ್ರೀ ಆರ್ಮುಗಂ ಅವರು ಒಂದು ಸೂಚನೆಯನ್ನೂ ಮಾಡಿದ್ದಾರೆ. ಆ ಸೂಚನೆಗನುಗುಣವಾಗಿ ಮಾನ್ಯ ಬಸವಲಿಂಗಪ್ಪನವರು ಹೇಳಿದ ಹಾಗೆ ಕಾನೂನು ಸಚಿವರು ಬಹುಶಃ......

ಶ್ರೀ ಕೆ. ಲಕ್ಷ್ಮಣ್.—ಮಾನ್ಯ ದೇವೇಗೌಡರೂ ವಿಷಾದ ಕೇಳಲಿ, ಮಾನ್ಯ ಆರ್ಮುಗಂ ಅವರು ಹೇಳಿದ ಹಾಗೆ ಮಾನ್ಯ ಕಾನೂನು ಸಚಿವರು ವಿಷಾದ ಕೇಳುವಂತೆ ನಾವೂ ಹೇಳುತ್ತೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ನಾನು ಮಾತನಾಡುವಾಗ ನನಗೆ ಯಾರೂ ತೊಂದರೆ ಮಾಡಬಾರದು.

ಶ್ರೀ ಕೆ. ಲಕ್ಷ್ಮಣ್.—ನಾವು ಮಾತನಾಡುವಾಗ ನೀವು ತೊಂದರೆ ಕೊಡಬಹುದೆ?

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ, ತಾವು ಸಭೆಗೆ ಬರುವುದಕ್ಕೆ ಮುನ್ನ ಕಾನೂನು ಸಚಿವರು ವಿಷಾದ ವ್ಯಕ್ತಪಡಿಸುವ ಸ್ಥಿತಿಯಲ್ಲಿದ್ದರು ಎಂದು ನನಗನ್ನಿಸುತ್ತದೆ......

(ಆಡಳಿತ ಪಕ್ಷದ ಸದಸ್ಯರಿಂದ ''ಇಲ್ಲ, ಇಲ್ಲ'' ಎನ್ನುವ ಕೂಗು – ಪ್ರತಿಭಟನೆ)

ಅಧ್ಯಕ್ಷರು.—ಮಾನ್ಯ ದೇವೇಗೌಡರು ಉಪಯೋಗಿಸಿರುವ ಪದವನ್ನು.........

ಶ್ರೀ ಗೋವಿಂದ ಪಿ. ಒಡೆಯರಾಜ್.—ತಾವು ಈಗ ದಯಮಾಡಿಸಿದಿರಿ, ಈಗ ಮತ್ತೆ ವಿಚಾರ ಪ್ರಸ್ತಾಪಕ್ಕೆ ಬಂದಿದೆ. ಮಾನ್ಯ ಕಾನೂನು ಸಚಿವರು, ತಾವು ಉಪಯೋಗಿಸಿದ ಶಬ್ದಗಳನ್ನು, ಉಪಯೋಗಿಸಿಲ್ಲವೆಂದು ನಿರಾಕರಿಸಿಲ್ಲ. ಅವರು ಉಪಯೋಗಿಸಿದ ಶಬ್ದಗಳಿಂದ ಯಾರಿಗಾದರೂ ನೋವಾಗಿದ್ದರೆ ಅದಕ್ಕಾಗಿ ವಿಷಾದ ಪಡುವ ಸ್ಥಿತಿಯಲ್ಲಿ ಅವರಿದ್ದರು. ಆದರೆ, ತಾವು ಬಂದು, ಆ ವಿಚಾರವಾಗಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿರಿ. ಆದುದರಿಂದ, ತಾವು ಕಾನೂನು ಸಚಿವರಿಗೆ ವಿಷಾದ ವ್ಯಕ್ತಪಡಿಸುವಂತೆ ತಿಳಿಸಬೇಕು.

ಅಧ್ಯಕ್ಷರು.—ಮಾನ್ಯ ದೇವೇಗೌಡರು ಹೇಳಿದ ಮಾತನ್ನು ವಾಪಸ್ಸು ತೆಗೆದುಕೊಳ್ಳಲಿ ಎಂದು ಅವರು ಹೇಳುತ್ತಿದ್ದಾರೆ. ಆದುದರಿಂದ, ನಾನು ಕೊಡುವ ನ್ಯಾಯ ಎರಡು ಕಡೆಯವರಿಗೂ ಸಮನಾಗಿರುವಂತೆ ನೋಡಿಕೊಳ್ಳಬೇಕು.

ಶ್ರೀ ಗೋವಿಂದ ಪಿ. ಒಡೆಯರಾಜ್.—ಈ ಸಭೆಯ ಮಾನ್ಯ ಸದಸ್ಯರು ಮಾತನಾಡುವುದರಿಂದ ಈ ಸಭೆಗಾಗಲಿ ಅಥವಾ ಸದಸ್ಯರಿಗಾಗಲೀ ಗೌರವ ಚ್ಯುತಿಯಾದರೆ......

ಶ್ರೀ ಜಿ. ಎಫ್. ಉಪನಾಳ್.—ಆಡಳಿತ ಮತ್ತು ವಿರೋಧ ಪಕ್ಷದವರೆಲ್ಲರೂ ಜನರಿಗೆ ಉತ್ತಮ ಭವಿಷ್ಯ ನೀಡುತ್ತೇವೆ ಎಂದು ಹೇಳಿ ಬಂದಿರುವವರು. ಮಾನ್ಯ ದೇವೇಗೌಡರು ಮತ್ತು ಕಾನೂನು ಸಚಿವರು ಇಲ್ಲಿಯವರೆಗೆ ನಡೆದ ಕಲಾಪಗಳ ಕಾವನ್ನು ಮರೆತು, ವೈಷಮ್ಯ ಬಿಟ್ಟು, ಒಂದುಗೂಡಿ ಸಭೆಯ ಕಲಾಪಗಳು ಸರಾಗವಾಗಿ ನಡೆಯುವಂತೆ ಸಹಕರಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಕಾನೂನು ಸಚಿವರು ಆಡಿರುವ ಮಾತಿನಿಂದ ಸಭೆಗೆ ಅಗೌರವವಾಗಿದೆ ಎನ್ನುವ ಪ್ರಶ್ನೆ ಇದು. ಇದನ್ನು ಆಡಳಿತ ಪಕ್ಷದ ಸದಸ್ಯರೂ ಒಪ್ಪಿಕೊಂಡರು ಮತ್ತು ಮಾನ್ಯ ಬಸವಲಿಂಗಪ್ಪನವರು ಇದೇ ಧಾಟಿಯಲ್ಲಿ ಮಾತನಾಡಿದ್ದಾರೆ.

(ಆಡಳಿತ ಪಕ್ಷದ ಸದಸ್ಯರಿಂದ ''ಇಲ್ಲ, ಇಲ್ಲ'' ಎನ್ನುವ ಕೂಗು—ಪ್ರತಿಭಟನೆ)

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರ ಕೊಡುವ ಕಾಲದಲ್ಲಿ, ಮಾನ್ಯ ದೇವೇಗೌಡರ ಗೌರವಕ್ಕೆ ಹಾನಿ ತರತಕ್ಕ ರೀತಿಯಲ್ಲಿ ಪದ ಪ್ರಯೋಗ ಮಾಡಬೇಕೆನ್ನುವ ಭಾವನೆ ನನಗಿರಲಿಲ್ಲ, ಸಂದರ್ಭೋಚಿತವಾಗಿ ಬಳಕೆ ಮಾತನ್ನು ಬಳಸಬೇಕಾಯಿತು, ಅದು ಅನ್‌ಪಾರ್ಲಿಮೆಂಟರಿ ಪದವಲ್ಲ ಎಂದು ಹೇಳಿದ್ದಾರೆ.

(ವಿರೋಧಿ ಪಕ್ಷದ ಸದಸ್ಯರಿಂದ ''ಇಲ್ಲ, ಇಲ್ಲ'' ಎನ್ನುವ ಕೂಗು—ಪ್ರತಿಭಟನೆ)

ಶ್ರೀಮತಿ ಎಸ್. ಪ್ರಮೀಳ.—ಮಾನ್ಯ ಸಚಿವರು ಅಷ್ಟನ್ನೂ ಹೇಳಲಿಲ್ಲ, ಅಷ್ಟು ಹೇಳಿದ್ದರೆ, ಸಮಸ್ಯೆ ಇಲ್ಲಿಗೆ ಮುಗಿದೇ ಹೋಗುತ್ತಿತ್ತು.

ಶ್ರೀ ಹೆಚ್. ಗಂಗಾಧರನ್.—ಈಗಲೂ ಆ ಮಾತನ್ನು ಮಾನ್ಯ ಸಚಿವರ ಬಾಯಿಂದ ಹೇಳಿಸಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಂತ್ರಿಗಳು ಮಾತನಾಡುವಾಗ, ಮಾನ್ಯ ದೇವೇಗೌಡ ಅಥವಾ ವಿರೋಧಿ ಪಕ್ಷದ ಸದಸ್ಯರಿಗಾಗಲೀ ಅವಮಾನ ಮಾಡಬೇಕು, ಅವರಿಗೆ ಅಗೌರವ ರಿಗಾಗಲಿ ಬೇಕು ಎನ್ನುವ ಉದ್ದೇಶದಿಂದ ಈ ಮಾತನ್ನು ಉಪಯೋಗಿಸಲಿಲ್ಲವೆಂದು ಹೇಳಿದ್ದಾರೆ. ತೋರಿಸ ವರದಿ ತರಿಸಿ ನೋಡಿ. ಬೇಕಾದರೆ

(ವಿರೋಧಿ ಪಕ್ಷದ ಸದಸ್ಯರಿಂದ ''ಇಲ್ಲ, ಇಲ್ಲ'' ಎನ್ನುವ ಕೂಗು—ಪ್ರತಿಭಟನೆ)

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಕಾನೂನು ಸಚಿವರು ಸಭೆಗೆ ಅವಮಾನ ಉಂಟು ಮಾಡುವ ಮಾತನ್ನು ಹೇಳಿದ್ದಾರೆ ಎಂದು ಮಾನ್ಯ ವಿರೋಧಿ ಪಕ್ಷದ ಸದಸ್ಯರುಗಳ ಅಭಿಪ್ರಾಯ. ಮಾನ್ಯ ಕಾನೂನು ಸಚಿವರು ಬಳಸಿರುವ ಪದಗಳು ಎಷ್ಟರಮಟ್ಟಿಗೆ ಸಭೆಯ ಗೌರವಕ್ಕೆ ಚ್ಯುತಿ ತರುತ್ತದೆ. ಅದು ಸಂಸದೀಯ ಪದವೇ ಅಥವಾ ಅಲ್ಲವೇ ಎನ್ನುವುದನ್ನು ನಿರ್ಣಯ ಮಾಡುವ ವಿಚಾರ ಮಾನ್ಯ ಅಧ್ಯಕ್ಷರಿಗೆ ಬಿಟ್ಟಿದ್ದು. ಯಾರು ಆಪಾದನೆ ಮಾಡುತ್ತಾರೆ, ಅವರೇ ತೀರ್ಮಾನ ಕೊಡುವುದು ನ್ಯಾಯವೂ ಅಲ್ಲ, ಧರ್ಮವೂ ಅಲ್ಲ ಮತ್ತು ಸಂಸದೀಯ ನಡವಳಿಕೆಯಲ್ಲಿ ಎಂದೂ ನಡೆದುಕೊಂಡುಬಂದಿರತಕ್ಕದ್ದಿಲ್ಲ. ಆದುದರಿಂದ, ಮಾನ್ಯ ಅಧ್ಯಕ್ಷರು ತಮ್ಮ ಅಧಿಕಾರವನ್ನು ಚಲಾಯಿಸಿ, ಮಾನ್ಯ ಸಚಿವರು ಬಳಸಿರುವ ಪದಗಳು ಸಂಸದೀಯ ಪದಗಳೇ ಅಥವಾ ಇಲ್ಲವೇ ಎನ್ನುವುದನ್ನು ಸಭೆಗೆ ತಿಳಿಸಬೇಕು.

SRI C. M. ARUMUGAM.—We are interested in the continuance of further proceedings of this House; but it is six 'O' clock now. We never said that the words * * * as unparliamentary. In the House nobody has got a right to say * * * to a member. These words have come from a very respectable Minister. That is why we are insisting that he should say 'regret'.

SRI K. H. HANUMEGOWDA.—You have to kindly remember in what context those words were uttered by the Minister. It comes from the Law Minister. He is a responsible member of the Cabinet and represents the Government. I have not said what he has said is unparliamentary. But the way in which it was mentioned the tone he used and the tension in which it was used, wounds the feelings of the Members in this House. It is rather provocative one.

6-00 P.M.

(Some Members from Ruling party stood up and shouted)

SRI C. M. ARMUGAM.—It is not good to confront the ruling party or the opposition. I am suggesting whether the Mi ister wishes to say anything in this matter. If he prolongs the issue we will see to it tomorrow. I don't think we are weak. If we want we can block the proceedings of the House. Don't forget it. We must be responsible for the proceedings, We are interested in the day-to-day proceedings of the House. If we are not responsible the House will not proceed

* * * Word/words expunged as ordered by the Chair.

with further proceedings. Because, we are interested in the demands to be passed. We are also interested in the Bills which are in the agenda. Therefore, there must be give and take police. Unless the Opposition co-operates it is very difficult to carry on the proceedings. Therefore, I submit that let the Minister not be so rigid. He must be loyal and he must be extraordinarily loyal to his leader. Because Ministers must be more loyal to Mr. Devaraj Urs. But the way in which he used the words" *** are little irritating. Therefore, if you say 'Iam sorry' you become more dignified and your status will also be elevated because of it.

MR. SPEAKER.—The proceedings that took place are like this:

"SRI H.D. DEVE GOWDA.—If you want to show extra loyalty to Mr. Devaraj Urs I am not going to come in his way of exhibiting his extra-loyalty to Mr. Devaraj Urs.

SRI L.G. HAVANUR.—I am loyal, but you can't raise it here. This is not the occasion. I have got to be loyal.***

In this connection I will refer May's Parliamentary Practice, On page 418 it states like this:

"Allegations against Members.—Good temper and moderation are the characterstics of parliamentary language. Parliamentary language is never more desirable than when a Member is canvassing the opinions and conduct of his opponents in debate.

The same right to claim courteous treatment in debate is due alike between both Houses of Parliament, and abusive language, and imputations of falsehood, uttered by members of the House of Commons against the Members of the House of Lords have usually been met by the immediate intervention of the Chair to compel the withdrawal of the offensive words"

S , if the hon'ble Member Sri H.D. Deve Gowda is affected and if the House says that it is affected, let the Hon'ble Minister withdraw it. If the Hon'ble Minister also says that he is affected let him say so. If not I will expunge it.

(Interruptions)

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ. ತಾವು ರೂಲಿಂಗ್ ಕೊಟ್ಟಿದ್ದೀರಿ ಅಂತ ಕಾಣುತ್ತೆ? ನಾನು ಅದರ ಬಗ್ಗೆ ಪ್ರಶ್ನೆ ಮಾಡುವುದಿಲ್ಲ. ತಾವು ನನಗೆ ಒಂದು ನಿಮಿಷ ದಯಮಾಡಿ ಅನುಮತಿ ಕೊಡಬೇಕು. ರೂಲ್ ೩೧೨ರ ಕೆಳಗಡೆ ತಮ್ಮ ಅನುಮತಿಯಿಂದ ಸರ್ಕಾರದ ವಕೀಲರು ಗ್ರೋವರ್ ಕಮೀಷನ್ ಮುಂದೆ ಮುಖ್ಯ ಮಂತ್ರಿಗಳ ಪರವಾಗಿ ವಕಾಲತ್ತು ತೆಗೆದುಕೊಂಡಿರತಕ್ಕಂಥಾದ್ದು ತಪ್ಪು ಅಂತ ಹೇಳಿ, ಈ ಸಭೆಯಲ್ಲಿ ಚರ್ಚೆ ಮಾಡುವಾಗ ನನ್ನ ಪೂರ್ಣ ಭಾಷಣ ಮುಗಿಯುವ

*** Word/words expunged as ordered by the Chair.

ವರೆವಿಗೂ ತಾವು ಇದ್ದಿರಿ ನಂತರ ಹಂಗಾಮಿ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು. ಆ ಸಂದರ್ಭದಲ್ಲಿ ನಾನು ಮುಖ್ಯಮಂತ್ರಿಗಳ ತೇಜೋವಧೆ ಬಗ್ಗೆ ಯಾವರೀತಿ ಭಾಷಣ ಮಾಡಿದೆ ಎಂಬುದನ್ನು ತಾವು ದಯವಿಟ್ಟು ವರದಿಯನ್ನು ತರಿಸಿ ನೋಡಬೇಕು. ಆದರೆ ಮಾನ್ಯ ಕಾನೂನು ಮಂತ್ರಿಗಳು ತಮ್ಮ ಭಾಷಣದ ಪ್ರಥಮದಲ್ಲಿಯೇ ಪೀಠಿಕೆ ಹಾಕಿ, ನನ್ನ ಮೂರು ತಿಂಗಳ ಅನುಭವದಲ್ಲಿ ಈ ಸದನದ ಕಾರ್ಯಕಲಾಪಗಳನ್ನು ನೋಡಿದ್ದೇನೆ, ಮುಖ್ಯ ಮಂತ್ರಿಗಳ ತೇಜೋವಧೆಯನ್ನು ಮಾಡುವುದರಲ್ಲಿಯೇ ಇದ್ದಾರೆಂದು ಹೇಳಿದ್ದಾರೆ. ಅವರು ಇಂಗ್ಲಿಷಿನಲ್ಲಿ ಹೇಳಿದ್ದಾರೆ. ನನಗೆ ಅಷ್ಟಾಗಿ ಇಂಗ್ಲಿಷ್ ಗೊತ್ತಾಗುವುದಿಲ್ಲ, ದಯವಿಟ್ಟು ಸ್ವಲ್ಪ ತೆಗೆಸಿನೋಡಿ. ನನ್ನ ಮೂರು ತಿಂಗಳ ಅನುಭವದಲ್ಲಿ ಸದನದ ಕಾರ್ಯಕಲಾಪದಿಂದ ಇದು ಖಚಿತಪಟ್ಟಿದೆ. ಈ ಸದನದಲ್ಲಿ ಕೆಲವು ಸದಸ್ಯರುಗಳು ಮುಖ್ಯ ಮಂತ್ರಿಗಳ ತೇಜೋವಧೆ ಮಾಡುವುದರಲ್ಲಿ ನಿರತರಾಗಿದ್ದಾರೆಂದು ಹೇಳಿದ್ದಾರೆ. ತಾವು ದಯವಿಟ್ಟು ತೆಗೆಸಿನೋಡಬೇಕು. ನಾನಂತೂ ಆ ಕೆಲಸ ಮಾಡಿಲ್ಲ.

ಶ್ರೀ ಎಲ್.ಜಿ. ಹಾವನೂರ್.—ನಾನು ಹಾಗೆ ಹೇಳಿಲ್ಲ, ಪ್ರೊಸೀಡಿಂಗ್ಸ್‌ನಲ್ಲಿಯೂ ಇಲ್ಲ.

SRI H. D. DEVE GOWDA.—It has been confirmed ಎಂದು ಹೇಳಿದ್ದಾರೆ. ನಾನು ಮುಖ್ಯ ಮಂತ್ರಿಗಳ ಬಗ್ಗೆ ಪ್ರಸ್ತಾಪ ಮಾಡಿರುವುದು ದಾಖಲೆಯಲ್ಲಿದೆ. ಕ್ಯಾರಕ್ಟರ್ ಅಸಾಸಿನೇಷನ್ ಎನ್ನುವ ಪದವನ್ನು ಯಾವಾಗ ಬಳಸಬೇಕು ಎಂಬುದು ನನಗೆ ಗೊತ್ತಿದೆ. ರೂಲ್ ೩೧೨ರ ಕೆಳಗೆ ಈ ವಿಷಯವನ್ನು ನಾನು ತಂದು ಯಾವುದನ್ನು ಉಪಯೋಗ ಮಾಡಬೇಕೋ ಅದನ್ನು ಮಾಡಿದ್ದೇನೆ. ಬೇರೆ ಯಾರಾದರೂ ಹೇಳಿದ್ದರೆ ಅದರ ಬಗ್ಗೆ ಹೇಳಲಿ. ಈಗ ತಾನೆ ಹೇಳಿದಿರಿ ಮುಖ್ಯಮಂತ್ರಿಗಳಿಗೆ ಎಕ್ಸಟ್ರಾ ಲಾಯಲ್ಟಿ ತೋರಿಸಿದ್ದೇನೆಂದು ಅದು ನಿಮ್ಮ ವಿಷಯ. If you want to exhibit extra loyalty I have no objection ಮತ್ತೆ ಅವರು '***' ಎಂದು ಹೇಳಿದ್ದಾರೆ. ನನ್ನ ಪರಿಚಯ ಅವರಿಗೆ ಮಾಡಿಕೊಡಬೇಕಾಗುತ್ತದೆ.

ಶ್ರೀ ಎಲ್.ಜಿ. ಹಾವನೂರ್.—ಹೆಚ್ಚಿನ ಪ್ರಮಾಣದಲ್ಲಿ ನನ್ನ ಪರಿಚಯವನ್ನು ಮಾಡಿಕೊಡಬೇಕಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ.—ತಮ್ಮ ರೂಲಿಂಗ್ ನಮಗೆ ಮಾರ್ಗದರ್ಶನ. ಅವರು '***' ಅಂತ ಹೇಳಿರುವುದರಿಂದ ನನಗೆ ಅಫೆಂಡ್ ಆಗಿಲ್ಲ. ನನ್ನ ಪರಿಚಯ ಅವರಿಗೆ ಮಾಡಿಕೊಡಬೇಕಾಗಿದೆ. ಹೊಳೆನರಸೀಪುರ ಮತದಾರರ ಕ್ಷೇತ್ರದಿಂದ ವಿಧಾನ ಸಭೆಗೆ ನೇರವಾಗಿ ಪ್ರಜೆಗಳ ಮತ ಪಡೆದು ಇಲ್ಲಿಗೆ ಚುನಾಯಿಸಿ ಬಂದಿರುವ ಸದಸ್ಯನಾದ ನಾನು ದಿನ ಒಂದಕ್ಕೆ ೩೧ ರೂಪಾಯಿಗಳ ಕೂಲಿ ಆಧಾರದ ಮೇಲೆ ಇಲ್ಲಿ ಕೆಲಸ ಮಾಡುತ್ತಿದ್ದೇನೆ. ನಿಮ್ಮ ಹಾಗೆ ರಾಜಕೀಯ ಮುಖಂಡರುಗಳ ಕಾಲು ಕಟ್ಟಿ ಈ ಸಭೆಗೆ ನಾನು ಬರಲಿಲ್ಲವೆಂದು ಹೇಳಿ ಸಭಾ ತ್ಯಾಗ ಮಾಡಬಯಸುತ್ತೇನೆ.

ಶ್ರೀ ಎಲ್.ಜಿ. ಹಾವನೂರ್.—ನಾಚಿಕೆಗೇಡು.

(ಸಭೆಯಲ್ಲಿ ಗೊಂದಲ)

MR. SPEAKER.—I request the Hon'ble Members not to lose patience. The Hon'ble Member H.D. Devegowda may address the chair, and not the Minister.

SRI H.D. DEVE GOWDA.—The Minister must know this limit. that is what I am saying.

ಶ್ರೀ ಎಲ್.ಜಿ. ಹಾವನೂರ್.—ಯಾರು ಲಿಮಿಟ್ಸ್ ಬಿಟ್ಟು ಹೋಗುತ್ತಾರೋ, ಅವರನ್ನು ಲಿಮಿಟ್ಸ್‌ನಲ್ಲಿ ತರಬೇಕಾದರೆ ನಾವು ಕೂಡ ಲಿಮಿಟ್ಸ್ ಬಿಟ್ಟು ಹೋಗಬೇಕಾಗುತ್ತದೆ.

*** Word/words expunged as ordered by the Chair.

SRI H.D. DEVE GOWDA.-If you are not going to conduct the House impartially it will be rather difficult for you to conduct the proceedings of the House. For the action of the Government and the Minister we are going to stage walkout.

ಶ್ರೀ ಮಳ್ಳೂರು ಆನಂದರಾವ್.—ನಾಳೆ ಬರುತ್ತೇವೆ ನೀವು ಹೇಗೆ ಸಭೆ ನಡೆಸುತ್ತೀರೋ ನೋಡುತ್ತೇವೆ.

(ವಿರೋಧ ಪಕ್ಷದ ಅನೇಕ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ವಿ. ಕಕ್ಕಿಲಾಯ.—ಮಾನ್ಯ ಸದಸ್ಯರಾದ ಶ್ರೀ ಸಿ.ಎಂ. ಆರ್ಮುಗಂ ಅವರು ಮಾನ್ಯ ಮಂತ್ರಿಗಳು ಹೇಳಿದ ಧಾಟಿಯ ಬಗ್ಗೆ ವಿಷಾದ ವ್ಯಕ್ತಪಡಿಸಬೇಕು ಎಂದು ಹೇಳಿದರು. ಅದರ ಬಗ್ಗೆ ಮಾನ್ಯ ಅಧ್ಯಕ್ಷರು ತಮ್ಮ ಅಭಿಪ್ರಾಯವನ್ನು ತಿಳಿಸಬೇಕು. ಮಾನ್ಯ ಮಂತ್ರಿಗಳು ಈ ಸದನದ ಒಬ್ಬ ಸದಸ್ಯರನ್ನು ಆ ಧಾಟಿಯಲ್ಲಿ ಮಾತನಾಡಿಸುವುದು ಸರಿಯೇ? ಆ ಬಗ್ಗೆ ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ವಿಷಾದ ವ್ಯಕ್ತಪಡಿಸಿದ್ದರೆ ಸಂತೋಷವಾಗುತ್ತಿತ್ತು. ಮಾನ್ಯ ಅಧ್ಯಕ್ಷರು ತಮ್ಮ ಅಭಿಪ್ರಾಯವನ್ನು ತಿಳಿಸಬೇಕು ಇಲ್ಲದೇ ಹೋದರೆ ಈ ಸದನದಲ್ಲಿ ಕೆಲಸ ಮಾಡಲಿಕ್ಕೆ ಕಷ್ಟವಾಗುತ್ತದೆ. ಈಗಾಗಲೇ ಅದರ ಪರಿಣಾಮವನ್ನು ತಾವೂ ಕೂಡ ನೋಡಿದ್ದೀರಾ, ಕೊನೆಗೆ ಮಾನ್ಯ ದೇವೇಗೌಡರು ಯಾವ ರೀತಿ ಮಾತನಾಡಿದರು ಎಂದು ನೋಡಿದ್ದೀರಾ. ಇಂಥಾದ್ದು ಈ ಸದನದಲ್ಲಿ ಆಗಬಾರದು. ಈ ಸದನದ ಕಾರ್ಯಕಲಾಪಗಳು ಬಹಳ ಗೌರವಯುತವಾಗಿ ನಡೆಯಬೇಕು ಎನ್ನುವುದೇ ನಮ್ಮ ಅಭಿಪ್ರಾಯ. ತಮ್ಮಲ್ಲಿ ನಾನು ವಿನಂತಿ ಮಾಡಿ ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ತಮ್ಮ ಅಪ್ಪಣೆ ಏನು ಎನ್ನುವುದನ್ನು ತಿಳಿಸಬೇಕು.

ಶ್ರೀ ಬಿ. ಭಾಸ್ಕರಶೆಟ್ಟಿ.—ಇವೊತ್ತು ನಾವು ಈ ಸಭೆಯ ಘನತೆ ಗೌರವವನ್ನು ಕಾಪಾಡಲು, ವಿಧಿ ನಿಯಮಗಳನ್ನು ಅನುಸರಿಸಿಕೊಂಡು ಈ ಸಭೆಯನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಈ ಸಭೆಯ ಘನತೆ ಗೌರವವನ್ನು ಕಾಪಾಡಬೇಕಾಗುತ್ತದೆ.

(ಸಭೆಗೆ ವಿರೋಧ ಪಕ್ಷದ ಸದಸ್ಯರ ಆಗಮನ)

ಇವೊತ್ತು ಈ ಸಭೆಯ ಕಾರ್ಯಕಲಾಪಗಳನ್ನು ಮೇಲೆ ಕುಳಿತಿರುವ ಜನ ನೋಡುತ್ತಾ ಇದ್ದಾರೆ. ಹೊರಗಡೆ ಇರುವ ಜನ ನೋಡುತ್ತಾ ಇದ್ದಾರೆ. ದಿನನಿತ್ಯ ಪತ್ರಿಕೆಯಲ್ಲಿ ನಾವು ಇಲ್ಲಿ ಏನು ಮಾಡುತ್ತೇವೆ ಎನ್ನುವ ವಿಷಯವನ್ನು ತಿಳಿದುಕೊಳ್ಳುತ್ತಾರೆ.

ಶ್ರೀ ಮಳ್ಳೂರು ಆನಂದರಾವ್.—ತಮ್ಮ ಮಿನಿಸ್ಟರು ಏನು ಮಾತನಾಡುತ್ತಾರೆ ಎನ್ನುವುದನ್ನೂ ನೋಡುತ್ತಾರೆ.

(ಸಭೆಯಲ್ಲಿ ಮತ್ತೆ ಗೊಂದಲ)

ಶ್ರೀ ಬಿ. ಭಾಸ್ಕರಶೆಟ್ಟಿ.—ಇತ್ತೀಚೆಗೆ ಏನೋ ದೆಹಲಿಯಿಂದ ಬಂದ ವರ್ತಮಾನ ***,

ಶ್ರೀ ಬಿ. ವಿ. ಕಕ್ಕಿಲಾಯ.—ಈ ಮನೆಯಲ್ಲಿರತಕ್ಕವರೆಲ್ಲರಿಗೂ ಕೂಡ ಸಹನೆ ಇದೆ ಎಂದು ತಿಳಿದುಕೊಳ್ಳಬೇಕು.***

ಅಧ್ಯಕ್ಷರು.—ಮಾನ್ಯ ಸದಸ್ಯರೆಲ್ಲರೂ ಒಟ್ಟಿಗೆ ಈ ರೀತಿ ಕೂಗಿದರೆ ಹೇಗೆ ?

ಶ್ರೀ ಮಳ್ಳೂರು ಆನಂದರಾವ್.—***ಅವರು ಹೇಳತಕ್ಕದ್ದನ್ನು ಟಾಲರೇಟ್ ಮಾಡಲಿಕ್ಕೆ ಸಾಧ್ಯವಿಲ್ಲ. ಅವರಿಗೆ ರಿಗ್ರೇಟ್ ಹೇಳುವ ಸೌಜನ್ಯತೆ ಇಲ್ಲದೇ ಹೋದರೆ ನಾವು ಸಹಕರಿಸಲಿಕ್ಕೆ ಆಗುತ್ತದೆಯೋ? ಅಧಿಕಾರ, ***

ಶ್ರೀ ಸಿ.ಎಂ. ಇಬ್ರಾಹಿಂ.—ಪಾಯಿಂಟ್ ಆಫ್ ಆರ್ಡರ್ ಅಧ್ಯಕ್ಷರೆ, ಈಗ ಈ ಮನೆ ೬ ಗಂಟೆಗೆ ಮುಗಿಯಬೇಕಾದ್ದು ಎಕ್ಸ್‌ಟೆಂಡ್ ಆಗಿ ಕಾರ್ಯಕಲಾಪಗಳು ನಡೆಯುತ್ತಿವೆ ಇದು ಮೊದಲನೆಯದು. ಇನ್ನು ಎರಡನೆಯದು ಮಾನ್ಯ ಸದಸ್ಯರು ಮಾತನಾಡಬೇಕಾದರೆ ದೆಹಲಿಯಿಂದ ವರ್ತಮಾನ ಬಂದು ಇವರಿಗೆ

*** Word/words expunged as ordered by the Chair.

***ಎಂದು ಹೇಳಿದ್ದಾರೆ. ಇದನ್ನು ಹೇಳಿರತಕ್ಕವರು ಸಾಮಾನ್ಯ ಸದಸ್ಯರಲ್ಲ. ಚೀಫ್ ವಿಪ್ ಚೀಫ್ ವಿಪ್ ಅವರು ಈ ಮಾತನ್ನು ಹೇಳಿದ್ದಾರೆ. ನಮಗೆ *** ಎನ್ನುವ ಮಾತನ್ನು ಅವರು ಹೇಳಬೇಕಾದರೆ, ಈ ಪದ ಉಪಯೋಗಿಸುವುದಕ್ಕೆ ಅವರು ಅರ್ಹರಾಗಿದ್ದಾರೆಯೇ? ಇದಕ್ಕೆ ತಾವು ರೂಲಿಂಗ್ ಕೊಡಬೇಕು.

ಅಧ್ಯಕ್ಷರು.—ನಾನು ಎರಡೂ ಕಡೆಯ ಸದಸ್ಯರುಗಳ ಮಾತುಗಳನ್ನು ಕೇಳಿದ ನಂತರ ಪಾರ್ಲಿಮೆಂಟಿನಲ್ಲಿ ಏನು ಒಂದು ಡಿಸಿಷನ್ ಕೊಟ್ಟಿದೆ ಮತ್ತು ಹೌಸ್ ಆಫ್ ಕಾಮನ್ಸ್‌ನಲ್ಲಿ ಒಬ್ಬ ಸದಸ್ಯರ ಜೊತೆ ಮತ್ತೊಬ್ಬ ಸದಸ್ಯರು ಯಾವರೀತಿ ಮಾತನಾಡಬೇಕು, ಯಾವರೀತಿ ಪದಗಳನ್ನು ಬಳಸಬೇಕು ಎನ್ನುವ ಡಿಸಿಷನ್ ಏನು ಇದೆ ಅದನ್ನು ಓದಿದ್ದೇನೆ. ಒಬ್ಬ ಸದಸ್ಯರು ಇನ್ನೊಬ್ಬ ಸದಸ್ಯರಿಗೆ ಅಫೆಂಡ್ ಆಗತಕ್ಕ ಅಥವಾ ಮನನೋಯಿಸತಕ್ಕ ಪದಗಳನ್ನು ಉಪಯೋಗಿಸಬಾರದು ಎಂದು ನಮ್ಮ ನಿಯಮಾವಳಿಗಳಲ್ಲಿದೆ. ಮಾನ್ಯ ಮಂತ್ರಿವರ್ಯರೇ ಆಗಲೀ, ಮಾನ್ಯ ಸದಸ್ಯರೇ ಆಗಲೀ ಯಾರೇ ಆಗಲಿ ಅಫೆಂಡ್ ಆಗುತ್ತದೆ ಎನ್ನುವುದು ಈ ಸಭೆಯ ಅಭಿಪ್ರಾಯವಾದರೆ ದಯಮಾಡಿ ಅವರು ಅದನ್ನು ವಾಪಸ್ ತೆಗೆದುಕೊಳ್ಳುವುದು ಶ್ರೇಷ್ಠವಾದುದು.

ಎರಡನೆಯದು, ಶ್ರೀಮಾನ್ ಇಬ್ರಾಹಿಂರವರು ಒಂದು ಪಾಯಿಂಟ್ ಆಫ್ ಆರ್ಡರ್ ಕೇಳಿದ್ದಾರೆ. ೬ ಗಂಟೆ ಮೇಲೆ ಸಭೆಯು ನಡೆಯುತ್ತಾ ಇದೆ ಇದು ಕ್ರಮವೇ ಎಂದು ಕೇಳಿದ್ದಾರೆ. ಇವತ್ತು ಸುಮಾರು ೬ ಮಸೂದೆಗಳು ಚರ್ಚೆಯಾಗಿ ಮುಗಿಯಬೇಕಾಗಿತ್ತು, ಇದು ಬಿಸಿನೆಸ್ ಅಡ್ವೈಸರಿ ಕಮಿಟಿ ಮಾಡಿರತಕ್ಕಂಥ ತೀರ್ಮಾನ. ಆ ತೀರ್ಮಾನಕ್ಕೆ ಈ ಮನೆಯವರು ಬಹುಶಃ ಮಾನ್ಯತೆ ಕೊಡಲೇಬೇಕು. ಅದು ಆಗದ ರೀತಿ ಅನಿವಾರ್ಯವಾಗಿ ಇವತ್ತು ಹಲವಾರು ವಿಚಾರಗಳು ಪ್ರಸ್ತಾಪಗಳು ಇಷ್ಟು ಕಾಲ ತೆಗೆದುಕೊಂಡು ರೆಗ್ಯುಲರ್ ಅಜೆಂಡಾ ಏನಿದೆ ಅದನ್ನು ನಡೆಸುವುದಕ್ಕೆ ಆಗಲಿಲ್ಲ. ೬ ಗಂಟೆಯಾದ ತಕ್ಷಣ ಈ ಸಭೆ ನಡೆಯುತ್ತಿರುವಾಗ ಯಾರಾದರೂ ಸದಸ್ಯರು ಆಕ್ಷೇಪ ಎತ್ತಿ, ೬ ಗಂಟೆ ಮೇಲೆ ಸಭೆಯನ್ನು ನಡೆಸುತ್ತಾ ಇದ್ದೀರಿ, ೬ ಗಂಟೆ ಮೇಲೆ ಸಭೆ ನಡೆಸಬಾರದು ಎಂದು ಕೇಳಿದ್ದರೆ ನಾನು ಸಭೆಯನ್ನು ಅಡ್ಜರ್ನ್ ಮಾಡುತ್ತಿದ್ದೆ. ಸಭೆ ನಡೆಯಲು ಅವಕಾಶಕೊಟ್ಟು, ಚರ್ಚೆಗೆ ಅವಕಾಶಕೊಟ್ಟು, ಆಕ್ಷೇಪಣೆ ಮಾಡದೇ ಇರತಕ್ಕ ಕಾಲದಲ್ಲಿ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ ಎಂದು ನನ್ನ ಅಭಿಪ್ರಾಯ.

ಮತ್ತೆ ಈ ಪದಗಳನ್ನು ಬಳಸಬಾರದು ಎನ್ನತಕ್ಕ ತೀರ್ಮಾನವನ್ನು ಏನು ನಾನು ಓದಿದ್ದೇನೋ ಅದೇರೀತಿ '***' ಎನ್ನುವ ಪದವನ್ನು ಉಪಯೋಗಿಸುವುದು ಸರಿಯಲ್ಲ ಮತ್ತು ಇಲ್ಲಿ ಒಬ್ಬ ಸದಸ್ಯರು '***' ಎನ್ನತಕ್ಕ ಪದವನ್ನು ಉಪಯೋಗಿಸಿದ್ದಾರೆ, ಅದೂ ಸರಿಯಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಮಳ್ಳೂರು ಆನಂದರಾವ್ ಅವರು ನನ್ನನ್ನು *** ಎಂದು ಹೇಳಿದ್ದಾರೆ, ಅದು ಸರಿಯಲ್ಲ.

ಅಧ್ಯಕ್ಷರು,-ಇನ್ಯಾವುದಾದರೂ ಪದಗಳನ್ನು ಉಪಯೋಗಿಸಿರುವುದು ನನಗೆ ಗೊತ್ತಿಲ್ಲದೇ ಹೋದರೆ ಅದನ್ನು ನಾನು ನೋಡುತ್ತೇನೆ. ಈಗ ಶ್ರೀಮಾನ್ ಭಾಸ್ಕರಶೆಟ್ಟರು ಯಾವ ಪದಗಳನ್ನು ಉಪಯೋಗಿಸಿದ್ದಾರೋ ಮತ್ತು ಮಾನ್ಯ ಆನಂದರಾಯರು ಮತ್ತು ಇತರೆ ಸದಸ್ಯರು ಯಾವ ಪದಗಳನ್ನು ಉಪಯೋಗಿಸಿದ್ದಾರೋ ಅದನ್ನು I have ordered to expunge it. ಮತ್ತೆ ಶ್ರೀಮಾನ್ ಎಚ್.ಡಿ. ದೇವೇಗೌಡರು ಯಾವ ಒಂದು ವಾಕ್ಯವನ್ನು ಹೇಳಿದ್ದಾರೋ ಮತ್ತು ಮಾನ್ಯ ಹಾವನೂರು ಅವರು ಯಾವ ಪದವನ್ನು ಬಳಸಿದ್ದಾರೋ ಅದನ್ನೂ ಸಹ ಎಕ್ಸಪಂಜ್ ಮಾಡಿದ್ದೇನೆ.

Now the House stand adjourned to meet tomorrow at 1 P. M.

The House adjourned at Twenty Five Minutes past Six of the Clock to meet again at One of the Clock on Tuesday, the 4th July 1978.

***Word or words expunged as ordered by the Chair.